6) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ಸೂರತ್ಕಲ್ ಮತ್ತು ಮಂಗಳೂರು ತಾಲ್ಲೂಕಿನಲ್ಲಿ ನಡೆದಂಥ ಗಲಭೆಗಳು.

ಶ್ರೀ+ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಮೊಟ್ಟ ಮೊದಲನೆಯದಾಗಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮಗೂ · ಕೂಡ ಮುಜುಗರವಾಗುತ್ತಿದೆ, ಏಕೆಂದರೆ ಪ್ರತಿ ಬಾರಿಯೂ ಚರ್ಚೆಗೋಸ್ಕರ ಅಡ್ಜೆರ್ನ್‌ಮೆಂಟ್ ಮೋಷನ್ ಕಳುಹಿಸುವುದು ಅಷ್ಟೊಂದು ಸರಿಯಲ್ಲವೆಂದು ನಮಗನ್ನಿಸಿದರೂ ಕೂಡ ವಿಷಯದ ಮಹತ್ವ ಮತ್ತು ಸಮಯದ ಕೊರತೆಯ ದೃಷ್ಟಿಯಿಂದ ಯಾವುದಾದರೂ ರೂಪದಲ್ಲಿ ಸದನದಲ್ಲಿ ವಿಷಯ ಚರ್ಚೆಯಾಗಲಿ ಎನ್ನುವ ಕಾರಣಕ್ಕೋಸ್ಕರ ಮತ್ತು ಇದಕ್ಕೆ ಸರ್ಕಾರ ಏನಾದರೊಂದು ಪರಿಹಾರ ಕಂಡುಹಿಡಿಯಲಿ ಎನ್ನುವ ದೃಷ್ಟಿಯಿಂದ ಈ ವಿಚಾರ ರೈಸ್ ಮಾಡುವುದಕ್ಕೋಸ್ಕರ ತಮ್ಮ ಅಪ್ಪಣೆಯನ್ನು ಪಡೆದುಕೊಂಡಿದ್ದೇವೆ. ಆ ಪ್ರಕಾರ ವಿಷಯ ರೈಸ್ ಮಾಡಿದ್ದೇವೆ. ಅಧ್ಯಕ್ಷರೆ ತಮಗೆ ಗೊತ್ತಿರುವ ಹಾಗೆ ಇಂದು ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲೇ ಒಂದು ಹೊಸ ವಾತಾವರಣ ಸೃಷ್ಟಿಯಾಗುತ್ತಿದೆ. ಇಂದು ಅನೇಕ ಕಡೆಗಳಲ್ಲಿ ಗಲಭೆಗಳನ್ನು ಮಾಡತಕ್ಕಂಥ, ಹೊಡೆದಾಟಗಳನ್ನು ಮಾಡತಕ್ಕಂಥದ್ದು ಮತ್ತು ಒಬ್ಬರ ಮೇಲೆ ಮತ್ತೊಬ್ಬರನ್ನು ಎತ್ತಿಕಟ್ಟತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗೆಯೇ ಎಲ್ಲಿ ಶಾಂತಿ ನೆಲೆಸಿದೆಯೋ ಅಲ್ಲಿ ಅಶಾಂತಿಯನ್ನು ಉಂಟುಮಾಡುವುದು. ಜಾತಿಯ, ಧರ್ಮದ ಮತ್ತು ಪಂಗಡಗಳ ಹೆಸರಿನ ಮೇಲೆ ಘರ್ಷಣೆಗಳನ್ನು ನಡೆಸತಕ್ಕಂಥ ಪ್ರವೃತ್ತಿ ಬೆಳೆಯುತ್ತಿದೆ. ಇದನ್ನೆಲ್ಲವನ್ನೂ ನಾವು ನೋಡಿದರೆ ಇಂದು ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ದೊಡ್ಡ ಪೆಟ್ಟು ಮತ್ತು ಒಂದು ರೀತಿಯ ಅಪಾಯದ ಪರಿಸ್ಥಿತಿಯು ಎದುರಾಗುವಂತೆ ತಯಾರಿ ಆಗುತ್ತಿದೆಯೇನೋ ಎನ್ನತಕ್ಕಂಥ ಭಾವನೆ ನಮ್ಮೆಲ್ಲರಿಗೂ ಬರುತ್ತಿದೆ. ದಿನಾಂಕ 28-12-98 ರಂದು ಒಂದು ಘಟನೆ ಸುರತ್ಕಲ್ ಮತ್ತು ಮಂಗಳೂರು ತಾಲ್ಲೂಕುಗಳಲ್ಲಿ ನಡೆಯಿತು. ಈ ಘಟನೆಯಿಂದ ಕೇವಲ ದಕ್ಷಿಣ ಕನ್ನಡಕ್ಕೆ ಮಾತ್ರವಲ್ಲದೆ ಉತ್ತರ ಕನ್ನಡ, ಮತ್ತು ಚಿಕ್ಕಮಗಳೂರುಗಳಲ್ಲಿ ಅಶಾಂತಿಯನ್ನುಂಟುಮಾಡುವ ಪರಿಸ್ಥಿತಿ ನಿರ್ಮಾಣವಾಯಿತು. ದಿನಾಂಕ: 29-12-98ರಂದು ನಡೆದ ಸಣ್ಣ ಘಟನೆಯಿಂದ ಇದು ಉದ್ಭವವಾಯಿತು. ಏನೆಂದರೆ ಅಂದು ಯಾವನೋ ಒಬ್ಬ ಯುವಕ ಒಂದು ಹುಡುಗಿಯನ್ನು ತಳ್ಳಿಕೊಂಡು ಹೋದನೆಂದು ಹೇಳಿಕೊಂಡು ಅದರ ಹಿನ್ನೆಲೆಯಲ್ಲಿಯೇ ದೊಡ್ಡ ಗಲಾಟೆಯಾಗಿ ಅಲ್ಲಿಂದ ಸುಮಾರು ಮೂರ್ನಾಲ್ಕು ಜನ ಯುವಕರನ್ನು ಪೊಲಿಸರು ಕರೆದುಕೊಂಡು ಪೋಲಿಸ್ ಠಾಣೆಯಲ್ಲಿ ಬಂಧಿಸಿದಾಗ ಅಲ್ಲಿರತಕ್ಕಂಥ ಕೆಲವು ಸಂಘಟನೆಗಳವರು ಇದನ್ನು ವಿರೋಧಿಸಿ ನ್ಯಾಶನಲ್ ಹೈವೇಯನ್ನು

ಬ್ಲಾಕ್ ಮಾಡಿ ಯಾರನ್ನು ಪೋಲಿಸರು ಬಂಧಿಸಿದ್ದರೋ ಅವರೆಲ್ಲರನ್ನೂ ಬಿಡುಗಡೆ ಮಾಡಬೇಕು ಎಂತಲೂ ಬಿಡುಗಡೆ ಮಾಡುವುದಕ್ಕೆ ಆಗದಿದ್ದರೆ ಬಂಧಿತರ ಮೇಲೆ ಯಾವ ರೀತಿಯ ನಾನ್-ಬೇಲಬಲ್ ಕೇಸ್ ಹಾಕಲಾಗಿತ್ತೋ ಅದನ್ನು ತೆಗೆದು ಬೇಲಬಲ್ ಕೇಸ್‌ಗಳೆಂದು ಮಾಡಿ ಬಂಧಿತರನ್ನು ಬೇಲ್ ಮೇಲೆ ಬಿಡುಗಡೆ ಮಾಡಬೇಕೆಂದು ಹೇಳಿ ದೊಡ್ಡ ರೀತಿಯಲ್ಲಿ ಮೆರವಣಿಗೆ ಮಾಡಿ ಗಲಾಟೆ ಮಾಡಿ ಬಂಧಿತರನ್ನು ಬೇಲ್ ಮೇಲೆ ಬಿಡುಗಡೆ ಮಾಡಿಸಿಕೊಂಡು ಹೋಗಿದ್ದಾರೆ. ಜಾಮೀನಿನ ಮೇಲೆ ಬಿಡುಗಡೆ ಮಾಡಿದ ಮೇಲೆ ಪುನಃ ಒಂದು ವಿಕ್ಟರಿ ಪ್ರೋಸೆಷನ್ ಮಾಡಿ ಆ ಪ್ರದೇಶದಲ್ಲಿ ಅಶಾಂತಿಯನ್ನು ಉಂಟು ಮಾಡುವ ವಾತಾವರಣವನ್ನು ಉಂಟುಮಾಡಿದ್ದಾರೆ. ಅದಕ್ಕೆ ಮುಖ್ಯ ಕಾರಣಕರ್ತರು ಯಾರು? ಯಾರು ಈ ಅಶಾಂತಿಯನ್ನು ಹುಟ್ಟಿಸಿದವರು? ಯಾವ ಸಂಘ ಸಂಸ್ಥೆಗಳನ್ನು ಕಡಿವಾಣದಲ್ಲಿಡುವುದಕ್ಕೆ ನೀವು ಏನು ಪ್ರಯತ್ನವನ್ನು ಮಾಡಿದ್ದೀರಿ? ಅಲ್ಲಿನ ಪೋಲಿಸ್ ಅಧಿಕಾರಿಗಳು ಏನು ಕೆಲಸವನ್ನು ಮಾಡುತ್ತಿದ್ದರು? ಅಲ್ಲಿನ ಎಸ್.ಪಿ.ಯವರು ಈ ಘಟನೆಯಿಂದ ಹೊಡೆದಾಟವಾಗಿ ಲೂಟಿಯಾಗಿ ಹಲವಾರು ಅಂಗಡಿಗಳು ಲೂಟಿಯಾಗಿ ನಂತರ ಪೋಲಿಸ್ ಫೈರಿಂಗ್ ಆಗಿ ಒಬ್ಬ ಸತ್ತಮೇಲೆ ಪುನಃ ಕೆಲವು ಜನರು ಸೇರಿಕೊಂಡು ಒಂದೇ ಮನೆಯೊಳಗೆ ಹೊಕ್ಕು ಅಲ್ಲಿದ್ದ ಮೂರು ಜನ ಮುಸ್ಲಿಂರನ್ನು ಕೊಲೆ ಮಾಡತಕ್ಕಂಥ ಕೆಲಸ ನಡೆದಿದೆ. ದಿನಾಂಕ: 8-12-98 ರಂದು ನಡೆದ ಸಣ್ಣ ಘಟನೆಯು ಬೆಳೆದು ಬೆಳೆದುಕೊಂಡು ದಿನಾಂಕ 29ಕ್ಕೆ ಒಂದು ರೂಪ ತಾಳಿದ ಮೇಲೆ ತಮ್ಮ ಗಮನಕ್ಕೆ ಬಂತೇ? ಇದಕ್ಕೆ ಮೊದಲೇ ಪ್ರಿಕಾಶನರಿ ಮೆಷರ್ಸ್‌ಗಳನ್ನು ತೆಗೆದುಕೊಂಡು ಆ ಎರಡು ಕೋಮುಗಳ ನಡುವೆ ಘರ್ಷಣೆ ನಡೆಯುವ ಸಂಭವವಿದೆ ಎಂದು ಪೋಲಿಸ್ ಅಧಿಕಾರಿಗಳು ಮೊದಲೇ ತಿಳಿದುಕೊಳ್ಳುವ ರೀತಿಯಲ್ಲಿ ತಮ್ಮ ವರ್ತನೆಯನ್ನು ಏಕೆ ಮಾಡಲಿಲ್ಲ? ಪೋಲಿಸ್ ಅಧಿಕಾರಿಗಳು ಈ ವಿಚಾರದಲ್ಲಿ ಒಂದು ದಿಟ್ಟವಾದಂಥ ನಿಲುವನ್ನು ತೆಗೆದುಕೊಳ್ಳದ ಕಾರಣವಾಗಿ ಮಂಗಳೂರು ಮತ್ತು ಸುರತ್ಕಲ್ ತಾಲ್ಲೂಕುಗಳಲ್ಲಿ ಸುಮಾರು 9 ಜನರು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಸುಮಾರು 57 ಜನರು ಈ ಘಟನೆಯಿಂದಾಗಿ ಗಾಯಗೊಂಡಿದ್ದಾರೆ. ಅದಕ್ಕೆ ಈ ಒಂದು ಘಟನೆಗೆ ಕಾರಣಕರ್ತರಾದಂಥವರು ಯಾರು ವಾದ ಈಗಾಗಲೇ ಬಹಿರಂಗವಾಗಿದೆ. ಅಲ್ಲಿರತಕ್ಕಂಥ ಭಜರಂಗದಳ ಆಗಲಿ, ಹಿಂದೂ ಜಾಗರಣಾ ಸಮಿತಿಯಾಗಲಿ ಮತ್ತು ಯುವಸೇನೆಯೇ ಆಗಲಿ....

ಶ್ರೀ ಡಿ.ವಿ. ಸದಾನಂದಗೌಡ :— ಭಜರಂಗದಳ ಎಂದು ಹೇಳುತ್ತಿದ್ದಾರೆ. ಈಗಾಗಲೇ ಮುಖ್ಯಮಂತ್ರಿಗಳೇ ಈ ಘಟನೆಗೆ ಸಂಬಂಧಪಟ್ಟಂತೆ ಯಾವುದೇ ಸಂಘಸಂಸ್ಥೆಗಳು ಕಾರಣವಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಆದರೂ ಇವರು ಬಹಿರಂಗದಳ ಎಂದು ಹೇಳುತ್ತಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ :— ಬಹಿರಂಗದಳ ಮತ್ತು ಯಾವುದೇ ಸಂಘಸಂಸ್ಥೆಗಳಾದರೆ ಯಾವುದೇ ಸಂಘಟನೆ ಇಲ್ಲ ಎಂದು ಸರ್ಕಾರ ಘೋಷಣೆ ಮಾಡಿದೆ.

(ಗೊಂದಲ)

ಉಪಾಧ್ಯಕ್ಷರು :— ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎ. ರುಕ್ಮಯ್ಯ ಪೂಜಾರಿ :— ಅದರ ಬಗ್ಗೆ ನ್ಯಾಯಾಂಗ ತನಿಖೆಯಾಗುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ :— ನಮ್ಮ ರಾಜ್ಯದ ಮುಖ್ಯಮಂತ್ರಿಗಳು ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ. ಅದರಲ್ಲಿ ಯಾವುದೇ ರಾಜಕೀಯ ಪಕ್ಷ ಯಾವುದೇ ಸಂಘಸಂಸ್ಥೆಗಳು ಇದಕ್ಕೆ ಕಾರಣವಲ್ಲ ಎಂದು. ಅದರ ಜೊತೆಗೆ ಇದರ ಬಗ್ಗೆ ನ್ಯಾಯಾಂಗ ತನಿಖೆ ಆಜ್ಞೆ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು :— ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ :— ಇಡೀ ರಾಜ್ಯದಲ್ಲಿ ಗುಂಪು ಗಲಭೆಗೆ ಇವರು ಪ್ರೇರಣೆ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾನು ಪಬ್ಲಿಕ್ ಪ್ಲಾಟ್‌ಫಾರಂ ಎಂದುಕೊಂಡು ಮಾತನಾಡುತ್ತಿಲ್ಲ. ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಎಸ್. ಯಡಿಯೂರಪ್ಪ :— ಈ ಘಟನೆ ಬಗ್ಗೆ ಸರ್ಕಾರ ಒಂದು ಹೇಳಿಕೆ ಕೊಡಲಿ ಇವರು ಊಹೆ ಮಾಡಿಕೊಂಡು ಮಾತನಾಡಿದರೆ ಆಗುವುದಿಲ್ಲ. ಸರ್ಕಾರ ಹೇಳಿಕೆ ಕೊಡಲಿ. ಯಾರು ಮಾಡಿದ್ದಾರೆ ಎಂದು. ನೀವು ಇಲ್ಲದ್ದು, ಸಲ್ಲದ್ದು ಎಲ್ಲಾ ಸೇರಿಸಿಕೊಂಡು ಹೇಳುತ್ತಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅವರು ಏನು ಹೇಳಬೇಕೋ ಅದನ್ನು ಹೇಳಲಿ. ನನ್ನದೇನೂ ಅಭ್ಯಂತರ ಇಲ್ಲ.

ಉಪಾಧ್ಯಕ್ಷರು :— ಶ್ರೀ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನಾರವರು ಅಧ್ಯಕ್ಷ ಪೀಠವನ್ನಲಂಕರಿಸಿದರು.

ಶ್ರೀ ಕೆ.ಎಸ್. ಈಶ್ವರಪ್ಪ :— ಅವರು ಮಾಡುವಂಥ ಕೆಲಸ ಇವತ್ತು ರಾಜಕೀಯ ಗುಂಪು ಗಲಭೆಗೆ ಕಾರಣವಾಗುತ್ತದೆ. ಈಗ ಅಲ್ಲಿ ಶಾಂತಿ ಇದೆ. ಕಾಂಗ್ರೆಸ್‌ನವರು ಕೋಮು ಗಲಭೆಗೆ ಕಾರಣರಾಗುತ್ತಾರೆ. ದಯವಿಟ್ಟು ಈ ಬಗ್ಗೆ ನೀವು ತೀರ್ಮಾನ ತೆಗೆದುಕೊಳ್ಳಿ. ಸರ್ಕಾರ ಇದರ ಬಗ್ಗೆ ಒಂದು ಹೇಳಿಕೆ ಕೊಡಲಿ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಈಗಾಗಲೇ ಸ್ಪಷ್ಟ ಮಾಡಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :— ಮಾನ್ಯ ಉಪಾಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್, ನಾನು ಇಷ್ಟೇ ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಗೃಹ ಸಚಿವರನ್ನು ವಿನಂತಿ ಮಾಡುವುದು, ಈಗಾಗಲೇ ತಾವು ನ್ಯಾಯಾಂಗ ತನಿಖೆಗೆ ಆದೇಶ ಮಾಡಿದ್ದೀರಿ. ತನಿಖೆಯಾಗುತ್ತದೆ. ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಪ್ರಸ್ತಾಪ ಮಾಡಬಾರದು ಎಂದು ನಾನು ಹೇಳುವುದಿಲ್ಲ. ಅವರಿಗೆ ಪ್ರಸ್ತಾಪ ಮಾಡುವುದಕ್ಕೆ ಸಂಪೂರ್ಣವಾದ ಹಕ್ಕು ಇದೆ. ತಾವು ಯಾವುದೇ ಸಂಘ ಸಂಸ್ಥೆಗಳ ಹೆಸರನ್ನು ಇಲ್ಲಿ ಹೇಳುವುದರ ಮೂಲಕ ನ್ಯಾಯಾಂಗ ತನಿಖೆಗೆ ನಿಷ್ಪಕ್ಷಪಾತವಾಗಿ ಅಡ್ಡಿಯುಂಟಾಗುತ್ತದೆ. ಈಗಿರುವ ರೂಲ್ಸ್ ಪ್ರಕಾರ ಒಂದು ಸಾರಿ ತಾವು ನ್ಯಾಯಾಂಗ ತನಿಖೆಗೆ ಆದೇಶ ನೀಡಿದ ಮೇಲೆ ಅವರು ಹೇಳುವಂತಹ ಘಟನೆ ಬಗ್ಗೆ ಸರ್ಕಾರ ಸ್ಟೇಟ್ ಮೆಂಟ್ ಕೊಡಲಿ. ನನ್ನದೇನೂ ಅಭ್ಯಂತರ ಇಲ್ಲ. ಅದು ಬಿಟ್ಟು ಇಲ್ಲಿ ಸಂಘಸಂಸ್ಥೆಗಳ ಹೆಸರು ಹೇಳಿ ನ್ಯಾಯಾಂಗ ತನಿಖೆಗೆ ನಿಷ್ಪಕ್ಷಪಾತವಾದ ತನಿಖೆಗೆ ಅಡ್ಡಿ ಮಾಡುತ್ತಿದ್ದಾರೆ. ದಯಮಾಡಿ ಮಾನ್ಯ ಉಪಾಧ್ಯಕ್ಷರು ಇದಕ್ಕೆ ಅಲೋ ಮಾಡಬಾರದು ಎಂದು ನನ್ನ ವಿನಂತಿ. ಇದರ ಬಗ್ಗೆ ತಾವು ರೂಲಿಂಗ್ ಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಆ ಪ್ರಶ್ನೆ ಉದ್ಭವಿಸುವುದಿಲ್ಲ ತಮಗೆ. ನಾನು ನೇರವಾಗಿ ಅವರೇ ಹೋಗಿ ಹೊಡೆದಿದ್ದಾರೆ, ಅವರೇ ಹೋಗಿದ್ದಾರೆ ಎಂದು ಹೇಳುತ್ತಿಲ್ಲ. ಇಂತಹ ಕೆಲವು ಸಂಘಸಂಸ್ಥೆಗಳು ಹೋಗಿ ಜನರನ್ನು ಪ್ರಚೋದನೆ ಮಾಡಿ ಈ ಗಲಭೆಗೆ ಪ್ರಚೋದನೆ ಮಾಡಿದ್ದಾರೆ ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ. ಅವರೇ ಹೋಗಿ ಖೂನಿ ಮಾಡಿದ್ದಾರೆ, ಅವರೇ ಹೋಗಿ ಲೂಟಿ ಮಾಡಿದ್ದಾರೆ ಎಂದು ಹೇಳಲಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಬಿ.ಜೆ.ಪಿ.ಯವರು ಮಾಡಿದ್ದಾರೆ ಎಂದು ನಾನು ಹೇಳಲಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾನು ಬಿ.ಜೆ.ಪಿ.ಯವರಿಗೆ ಏನೂ ಆಕ್ಷೇಪಣೆ ತೆಗೆದುಕೊಂಡಿಲ್ಲ. ಅಥವಾ ಅವರೇ ಮಾಡಿದ್ದಾರೆ ಎಂದು ಹೇಳಲಿಲ್ಲ. ನಾನು ಹೇಳಿದ್ದುದು ಏನೆಂದರೆ ಕೆಲವು ಇಂತಹ ಸಂಘ ಸಂಸ್ಥೆಗಳು ಒಂದು ಘಟನೆಗೆ ಪ್ರಚೋದನೆ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಆ ಪ್ರಚೋದನೆ ಮಾಡತಕ್ಕಂಥ ಸಂಘಸಂಸ್ಥೆಗಳು ಏನಿವೆ...

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಉಪಾಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ. ನಾನು ಏನು ಹೇಳುತ್ತಿದ್ದೇನೆಂದರೆ ಮಾನ್ಯ ಯಡಿಯೂರಪ್ಪನವರಿಗೆ ಹಾಗೂ ಸ್ನೇಹಿತರಿಗೆ, ಅವರು ಮಾತನಾಡುವುದು ಏನಿದೆ ಅದನ್ನು ಮಾತನಾಡಲಿ. ನಮಗೂ ಮಾತನಾಡುವುದಕ್ಕೆ ಅವಕಾಶ ಇದೆ. ನಾವು ಮಾತನಾಡೋಣ. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಅವರು ಮಾತನಾಡಿದ ನಂತರ, ಅವರು ಏನು ಮಾತನಾಡಿದರು, ಅದರ ಬಗ್ಗೆ ನಾವು ಮಾತನಾಡೋಣ.

(ಗೊಂದಲ)

ಉಪಾಧ್ಯಕ್ಷರು :— ಅವರು ಇನ್ನು ಮುಗಿಸಿಯೇ ಇಲ್ಲ, ಅವರು ಏನು ಹೇಳುತ್ತಾರೆ ಕೇಳಿಯೇ ಇಲ್ಲ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :— ಮಾನ್ಯ ಉಪಾಧ್ಯಕ್ಷರೇ, ಈ ಸದನದಲ್ಲಿ ಏನಾದರೂ ಒಂದು ವಿಚಾರವನ್ನು ಪ್ರಸ್ತಾಪ ಮಾಡಿ ಚರ್ಚೆ ಮಾಡುವುದಕ್ಕೆ ಹಕ್ಕು ಇದೆಯೋ ಇಲ್ಲವೋ? ಅದರ ಬಗ್ಗೆ ನೀವು ರೂಲಿಂಗ್ ಕೊಟ್ಟುಬಿಡಿ. ಇಲ್ಲಿ ಯಾವುದೇ ಹೆಸರು ಹೇಳಬಾರದು, ಎಂದು ನಿರ್ಬಂಧನೆ ಇಲ್ಲ. ಆ ರೀತಿಯಾದ ನಿರ್ಬಂಧ ಇದ್ದರೆ ಮಾನ್ಯ ಉಪಾಧ್ಯಕ್ಷರು ಅದರ ಬಗ್ಗೆ ರೂಲಿಂಗ್ ಕೊಡಬೇಕು. ಇಂತಹ ವಿಷಯವನ್ನು ಈ ಸದನದ ಸದಸ್ಯರು ಪ್ರಸ್ತಾಪ ಮಾಡಬಾರದು. ಇಂತಹ ವಿಷಯವನ್ನು ಪ್ರಸ್ತಾಪ ಮಾಡಬೇಕು. ಇಂತಹವರ ಹೆಸರು ಹೇಳಬಾರದು, ಇಂತಹವರ ಹೆಸರು ಹೇಳಬಹುದು ಎಂದು ಏನಾದರೂ ನಿಯಮವಿದ್ದರೆ ದಯವಿಟ್ಟು ತಾವು ರೂಲಿಂಗ್ ಕೊಡಿ. ನನಗೆ ನೀವು ಅನುಮತಿ ಕೊಟ್ಟಿದ್ದೀರಿ ನಾನು ಮಾತನಾಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ನಿಂತು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ ಅದು ಸರಿಯಿಲ್ಲವೆಂದರೆ...

ಉಪಾಧ್ಯಕ್ಷರು :— ಇನ್ನು ಅವರು ಏನೂ ಹೇಳಲೇ ಇಲ್ಲ.

ಶ್ರೀ ಯು.ಆರ್. ಸಭಾಪತಿ :— ಕಳ್ಳನ ಮನಸ್ಸು ಹುಳ್ಳಹುಳ್ಳಗೆ ಎಂದಹಾಗೆ ಕಳ್ಳ ಅಂದ ಕೂಡಲೆ ಮೈಮೇಲೆ ಬೀಳುತ್ತಾರೆ.

ಶ್ರೀ ಬಿ.ಎನ್. ಬಚ್ಚೇಗೌಡ :— ಅವರವರೇ ಮಾತನಾಡಿದರೆ ಹೇಗೆ? ಇದು ಅಸೆಂಬ್ಲಿನೋ ಅಥವಾ ಬೇರೆ ಏನು ಎಂದು ತಿಳಿದುಕೊಂಡಿದ್ದೀರಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅವರಿಗೆ ಅಡ್ಡಿಪಡಿಸತಕ್ಕಂಥ ಹಕ್ಕು ಯಾರಿಗಾದರೂ ಉಂಟಾ? ಅವರ ವಿಚಾರವನ್ನು ಒಪ್ಪುವುದು ಬಿಡುವುದು ಬೇರೆ ವಿಷಯ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ :— ಮಾನ್ಯ ಉಪಾಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್. ಸನ್ಮಾನ್ಯ ಪ್ರಕಾಶ್‌ರವರು ಮಾತನಾಡುವಾಗ ಹೇಳಿದರು, ಯಾವುದಾದರೂ ವಿಚಾರ ಕೋರ್ಟ್‌ನಲ್ಲಿ ಇದ್ದಾಗ ಮಾತನಾಡುವುದು ಸಬ್-ಜ್ಯೂಡಿಸ್ ಆಗುತ್ತದೆ, ಅದರ ಬಗ್ಗೆ ಮಾತನಾಡಬಾರದೆಂದು ಹೇಳಿದರು. ಅದೇ ಸಂದರ್ಭದಲ್ಲಿ ಅವರು ನ್ಯಾಯಾಂಗ ತನಿಖೆಗೆ ಒಂದು ಸಮಯ ಕ್ರಿಮಿನಲ್ ಕೇಸ್ ಇಂಥಾದ್ದು ಏನಾದರೂ ತೀರ್ಮಾನಕ್ಕೆ ಹೋದಾಗ ಆ ಬಗ್ಗೆ ವಿಶೇಷವಾಗಿ ಮಾತನಾಡಬಾರದು ಎಂದೂ ಕೂಡ ಹೇಳಿದರು. ಅದೇ ನಿಯಮ ಕೂಡ ಇದಕ್ಕೆ ಅಪ್ಲೆ ಆಗುತ್ತದೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ನ್ಯಾಯಾಂಗ ತನಿಖೆಗೆ ಈ ವಿಷಯವನ್ನು ಕಳುಹಿಸಿರುವುದರಿಂದ ಇದು ರೆಫರ್ ಆಗಿರುವುದರಿಂದ ಯಾವುದೇ ಸಂಘಸಂಸ್ಥೆಗಳು ಇದಕ್ಕೆ ಶಾಮೀಲಾಗಿದೆ ಎನ್ನುವ ವಿಷಯವನ್ನು ಇಲ್ಲಿ ಮಾತನಾಡುವುದಕ್ಕೆ ಬರುವುದಿಲ್ಲ. ಆ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಬಾರದು ಎಂದು ಇಲ್ಲಿ ಇರತಕ್ಕಂಥ ಕಾನೂನು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅದು ಯಾವ ನಿಯಮದ ಅಡಿಯಲ್ಲಿದೆ ಎಂಬುದನ್ನು ಹೇಳಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಇದು ನ್ಯಾಯಾಂಗ ತನಿಖೆಗೆ ಒಳಗಾಗಿರುವುದರಿಂದ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನೀವು ಅಡ್ವೋಕೇಟ್ ನಾವು ಅಡ್ವೋಕೇಟ್, ಇದು ಯಾವ ನಿಯಮದ ಅಡಿಯಲ್ಲಿ ಇದೆಯೆಂದು ಹೇಳಿ. ಆಗ ನಾವು ಅದನ್ನು ಒಪ್ಪಿಕೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಇದು ಸಬ್-ಜ್ಯುಡಿಸೀಸ್ ಆಗುತ್ತದೆ ಎನ್ನುವ ವಿಷಯ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಕೋರ್ಟ್‌ನಲ್ಲಿ ಇರತಕ್ಕಂಥ ವಿಷಯ ಆದರೆ ಅದರ ಬಗ್ಗೆ ಮಾತನಾಡಬಾರದು.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಕೋರ್ಟ್‌ನಲ್ಲಿ ಇರತಕ್ಕಂಥ ವಿಷಯ. ಇದರ ಬಗ್ಗೆ ತೀರ್ಮಾನಕ್ಕೆ ಇರುವುದು. Directly involved. ಅವರು ಎರಡು ಸಂಘಸಂಸ್ಥೆಗಳ ಹೆಸರು ಹೇಳಿದ್ದರಿಂದ ನಾವು ಮಾತನಾಡುತ್ತಿರುವುದು. ರೆಕಾರ್ಡ್ ತೆಗೆದು ನೋಡಿ ತಾವು. ಅದು ಹೇಳಿದ್ದರಿಂದ ನಾನು ಮಾತನಾಡುತ್ತಿರುವುದು.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಉಪಾಧ್ಯಕ್ಷರೇ, ಇದು ಸಬ್-ಜ್ಯುಡೀಸ್ ಆಗುವ ಪ್ರಶ್ನೆನೇ ಇಲ್ಲ. ಏಕೆಂದರೆ ಇದು ಕೋರ್ಟ್ ಮುಂದೆ ಇಲ್ಲ. ಎನ್‌ಕ್ವೈರಿ ನಡೆಯುತ್ತಾ ಇಲ್ಲ. ಜ್ಯುಡಿಷಿಯಲ್ ಪ್ರೋಬ್ ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿಯಿಂದ ಆ ಫ್ಯಾಕ್ಟ್ಸ್ ಫೈಂಡಿಂಗ್ ಆದಮೇಲೆ ಯಾರ್ಯಾರು ಏನೇನು ತೀರ್ಮಾನಕ್ಕೆ ಬರುತ್ತಾರೆ, ಯಾರು ತಪ್ಪು ಮಾಡಿದ್ದಾರೆ, ಯಾರು ಇಲ್ಲ ಎನ್ನುವುದು ಜ್ಯುಡಿಷಿಯಲ್ ಪ್ರೋಬ್‌ನಲ್ಲಿ ಬರುತ್ತದೆ. ಇದು ಸಬ್ ಜ್ಯುಡೀಸ್ ಆಗುವ ಪ್ರಶ್ನೆನೆ ಇಲ್ಲ. ಯಾರು ಇನ್‌ಫ್ಲೂಯೆನ್ಸ್ ಆಗುವ ಪ್ರಶ್ನೆನೆ ಇಲ್ಲ. ಅವರು ಅಲ್ಲಿ ಏನು ರಿಪೋರ್ಟ್ ಕೊಡುತ್ತಾರೆ, ಕೊಟ್ಟಮೇಲೆ ಯಾರು ತಪ್ಪಿತಸ್ಥರು ಇದ್ದಾರೆ, ಅವರ ಮೇಲೆ ಮೇಲೆ ಕೇಸ್ ಹಾಕುತ್ತಾರೆ. ಪುನಃ ಕೋರ್ಟ್‌ನಲ್ಲಿ ನಡೆಯುತ್ತದೆ. ತಮಗೆ ಗೊತ್ತಿದೆ. ಗೊತ್ತಿದ್ದರೂ ಏನಾಗುತ್ತದೆ ಎಂದರೆ ಶ್ರೀಮತಿ ಪ್ರಮೀಳಾರವರು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿಯವರು :— ಎಕ್ಸ್‌ಪೋರ್ಟ್ ಅಡ್ವೋಕೇಟ್ ಆಗಿದ್ದಾರೆ. ತಮಗೆ ಏನು ಬೇಕೋ ಅದನ್ನು ಇಂಟರ್‌ಪಿಟ್ ಮಾಡಿ ಕೋರ್ಟ್‌ನಲ್ಲಿ ಹೇಳುವಂತೆ ಹೇಳಿಬಿಡುತ್ತಾರೆ. ಆದರೆ ಇದೇನು ಕೋರ್ಟೇ? ಸಬ್-ಜ್ಯುಡೀಸ್ ಆಗಲು ಇದರ ಬಗ್ಗೆ ಏನಾದರೂ ತೀರ್ಮಾನ ಈಗಾಗಲೇ ಆಗಿದೆಯೇ? ಇದು ಇನ್ನೂ ಫ್ಯಾಕ್ಟ್ಸ್ ಫೈಂಡಿಂಗ್ ಸಮಿತಿ. ಬೇಕಾದರೆ ವರದಿಯಲ್ಲಿ ಯಾರು ಬೇಕಾದರೂ ಹೋಗಿ ಎವಿಡೆನ್ಸ್ ಕೊಡಬಹುದು. ಒಂದು ವಿಚಾರದಲ್ಲಿ ನಾನು ಇವರು ಇದ್ದಾರೆ ಎಂದು ಹೇಳುತ್ತೇವೆ, ಅವರು ಇಲ್ಲ ಎಂದು ಹೇಳಬಹುದು, ಮತ್ತೊಬ್ಬರು ಬೇಡ ಎಂದು ಹೇಳಬಹುದು. ಆದ್ದರಿಂದ ಇಲ್ಲಿ ಸಬ್-ಜ್ಯುಡೀಸ್ ಆಗುವುದಿಲ್ಲ. ಆ ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಯಾವ ಅರ್ಥವೂ ಇಲ್ಲ. ಹಿಂದೂ ಜಾಗರಣಾ ಸಮಿತಿ, ವಿಶ್ವ ಹಿಂದೂ ಪರಿಷತ್, ಯುವಸೇನಾ, ಭಜರಂಗದಳ ಇಂಥ ಸಂಸ್ಥೆಗಳು ಅಲ್ಲಿ ಅಶಾಂತಿಯನ್ನು ಉಂಟು ಮಾಡುವುದಕ್ಕೆ ಪ್ರಚೋದನೆ ನೀಡಿದೆ ಎಂಬ ವದಂತಿ ಇದೆಯೆಂದು ಹೇಳಿದ್ದೇನೆ. ಆ ರೀತಿ ಇದ್ದಮೇಲೆ ಸರ್ಕಾರ ಏನು ಕ್ರಮ ಜರುಗಿಸಿದೆಯೆಂದು ನಾನು ಕೇಳುತ್ತಲೇ ಇದ್ದೇನೆ, ಆದರೆ ಅವುಗಳ ಹೆಸರನ್ನು ತೆಗೆದುಕೊಳ್ಳಬೇಡಿ ಎಂದರೆ ಹೇಗೆ? ಇಲ್ಲಿ ಮಾತ್ರವಲ್ಲ ಇಡೀ ದೇಶದಲ್ಲೇ ಇಂಥ ಸಂಘಸಂಸ್ಥೆಗಳಿಂದ ಈ ಕೆಲಸವಾಗಿದೆ. ಸೂರತ್‌ಕಲ್,

ಮಂಗಳೂರು, ಬಾಬಾಬುಡನ್‌ಗಿರಿ ಮಾತ್ರವಲ್ಲ ಎಲ್ಲೇ ಇಂಥ ಕೋಮುಗಲಭೆಗಳು ನಡೆದರೆ ಅಲ್ಲಿ ಹೆಚ್ಚಾಗಿ ಇಂಥ ಸಂಘ ಸಂಸ್ಥೆಗಳಿಂದ ಆಗಿದೆ ಎಂಬುದು ಪತ್ರಿಕೆಗಳಲ್ಲಿ ಬಂದಿದೆ, ಬಹಿರಂಗವಾಗಿ ಎಲ್ಲರೂ ಹೇಳತಕ್ಕದ್ದನ್ನು ಕೇಳಿದ್ದೇವೆ. ಅದನ್ನು ಅನೇಕ ಜನರು ಕಂಡಮ್ ಮಾಡಿದ್ದೂ ಸಹ ತಮಗೆಲ್ಲರಿಗೂ ಗೊತ್ತಿದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಯಾವ ನಿಲುವನ್ನು ತಳೆದಿದ್ದಾರೆ, ಯಾರ್ಯಾರ ವಿರುದ್ಧ ಕ್ರಮ ಜರುಗಿಸಿದ್ದಾರೆ, ಎಂದು ಕೇಳಬಯಸುತ್ತೇನೆ. ಅಲ್ಲಿ ಒಂಭತ್ತು ಜನರ ಪ್ರಾಣಹೋಯಿತು, ಕೇವಲ ಘರ್ಷಣೆಯಾಗಿದ್ದರೆ ಬೇರೆ ಮಾತಾಗಿತ್ತು, ಆದರೆ ಮನೆಯಲ್ಲಿ ಮಲಗಿದ್ದವರಿಗೂ ಹೊಡೆಯುವುದು, ಅಂಗಡಿಗಳನ್ನು ಮುಚ್ಚಿದ್ದರೂ ಸುಡುವುದನ್ನು ಮಾಡಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರೇ ಅಲ್ಲಿ ಹತ್ತನೆ ತಾರೀಖಿನಂದು ಹೋಗಿದ್ದಾಗ ಹೀಗೆ ಹೇಳಿದ್ದಾರೆ. ಘಟನೆಯು 29, 30,31, ಮತ್ತು 1ನೇ ತಾರೀಖಿನಲ್ಲಿ ಆಗಿದ್ದರೆ ಇವರು ಅಲ್ಲಿಗೆ ಭೇಟಿಕೊಟ್ಟಿದ್ದು 10ನೇ ತಾರೀಖು. ಅವರ ಪಕ್ಷದ ಅಂತರಿಕ ಒಳಜಗಳಗಳಿಂದಾಗಿ ಅವರು ಬೇಗನೆ ಹೋಗಲು ಆಗಲಿಲ್ಲ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :— ತಾವು ವಿಷಯವನ್ನು ನೇರವಾಗಿ ಹೇಳುವುದನ್ನು ಬಿಟ್ಟು ಸುತ್ತಿಬಳಸಿ ಏಕೆ ಹೇಳುತ್ತೀರಿ? ಅಲ್ಲಿಗೆ ತಮ್ಮ ಪಕ್ಷದ ಅಧ್ಯಕ್ಷರಾದ ಸೋನಿಯಾಗಾಂಧಿಯವರು ಬಂದಿದ್ದರು, ಅದಕ್ಕೆ ಹೋಗಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಮ್ಮ ಸೋನಿಯಾಗಾಂಧಿಯವರು ತಮಗಿಂತ ಮೊದಲೇ ಹೋಗಿದ್ದರು. ತಾವು ಒಂದನೆ ತಾರೀಖು ಹೋಗಬಹುದಾಗಿತ್ತು. ಎರಡನೇ ತಾರೀಖು ಹೋಗಬಹುದಾಗಿತ್ತು.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಅಲ್ಲಿ ಘಟನೆಯಾದ ಆರು ದಿವಸಗಳ ನಂತರ ನಾನು ಹೋದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಅತ್ಯಂತ ಅಮಾನುಷ ಘಟನೆಗಳು ನಡೆದಿದ್ದವು. ಅಲ್ಲಿ ಇದ್ದಂಥ ಎಲ್ಲಾ ಅಧಿಕಾರಿಗಳನ್ನು, ಜನತಾ ಪ್ರತಿನಿಧಿಗಳನ್ನು ಕರೆಸಿ ಈ ಘಟನೆಗಳಲ್ಲಿ ಯಾವುದೇ ರಾಜಕೀಯ ಪಕ್ಷದ ಕೈವಾಡವಿಲ್ಲವೆಂದು ಖಚಿತವಾಗಿ ಹೇಳಿದ್ದೇನೆ. ಇದರಲ್ಲಿ ಯಾರ ಕೈವಾಡವಿದೆ ಎಂಬ ಬಗ್ಗೆ ಪತ್ತೆ ಮಾಡಲು ನ್ಯಾಯಾಂಗ ತನಿಖೆ ಮಾಡುತ್ತಿದ್ದೇವೆ. ಇದು ಸಬ್-ಜ್ಯುಡೀಸ್ ಆಗುವುದಿಲ್ಲವೆಂಬ ವಿರೋಧ ಪಕ್ಷದ ನಾಯಕರ ಮಾತು ಸರಿಯಾಗಿದೆ. ಆದರೆ ಯಾವುದೇ ನ್ಯಾಯಾಂಗ ತನಿಖೆಗೆ ಆದೇಶ ಮಾಡಿದಾಗ ಅದರ ವಿವರಣೆ ಬಹೂ ಮಾತನಾಡುವುದರಿಂದ ಪ್ರಿಜ್ಯುಡೀಸ್ ಆಗುತ್ತದೆ, ಆದರೆ ಸಬ್-ಜ್ಯುಡೀಸ್ ಆಗುವುದಿಲ್ಲ. ಇದರ ಬಗ್ಗೆ ವಿವರವಾಗಿ ಮಾತನಾಡುವುದರ ಬದಲಾಗಿ ಅಲ್ಲಾಗಿರುವ

ಅಮಾನುಷ ಕೃತ್ಯಗಳ ಬಗ್ಗೆ ಹೇಳುವುದಾದರೆ ನನ್ನ ಅಭ್ಯಂತರವೇನಿಲ್ಲ. ಅದನ್ನು ನಾನೇ ಸ್ವತಃ ನೋಡಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :—ತಾವು ಅಲ್ಲಿ ಹೋಗಿ ಹೇಳಿದಮೇಲೆ, ನಾನು ಸಹ ಅದೇ ಮಾತನ್ನು ಅಲ್ಲಿ ಹೇಳಿದ್ದೇನೆ. ಈ ಪ್ರದೇಶ ಯಾರ ಆಡಳಿತದಲ್ಲಿದೆಯೆಂದು ಪ್ರಶ್ನೆಯನ್ನು ತಮ್ಮ ಅಧಿಕಾರಿಗಳಿಗೆ ಅಲ್ಲಿ ಹೋಗಿದ್ದಾಗ ನಾನು ಕೇಳಿದೆ. ಹಾಡು ಹಗಲಿನಲ್ಲಿ ಮುಸುಕುಧಾರಿಗಳು ಆಕ್ರಮಣ ಮಾಡುವುದು ಎಂದರೇನು? ಇದು ವ್ಯವಸ್ಥಿತವಾದ ಗಲಭೆಯಂತೆ ತೋರುತ್ತಿದೆ ಎನ್ನತಕ್ಕ ಮಾತು ಮುಖ್ಯಮಂತ್ರಿ ಜೆ.ಹೆಚ್. ಪಟೇಲರು ಹಿರಿಯ ಪೋಲೀಸ್ ಅಧಿಕಾರಿಗಳನ್ನು ಪ್ರಶ್ನಿಸಿ ಪ್ರತಿಕ್ರಿಯಿಸಿದ ರೀತಿ ಇದು ಹತ್ತನೆ ತಾರೀಖಿನ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ. ತಮಗೆ ನೋಡಿದ ತಕ್ಷಣ ಇದು ಗೊತ್ತಾಗಿರಬೇಕಾದರೆ ಆ ಮುಸುಕುಧಾರಿಗಳು ಯಾರು? ಇದು ತಮಗೆ ಗೊತ್ತಿದೆ. ನಾನು ಹೇಳುವುದರಿಂದ ಇದು ಪ್ರಿಜ್ಯುಡೀಸ್ ಆಗುತ್ತದೆ ಎಂಬ ತಮ್ಮ ಅನಿಸಿಕೆಯೇನಿದೆ ಅದು ಸತ್ಯಕ್ಕೆ ದೂರವಾದುದು. ನಾನು ಯಾವುದೇ ಪಕ್ಷದ ಬಗ್ಗೆ ಹೇಳಲಿಲ್ಲ. ಕೆಲವು ಸಂಘ ಸಂಸ್ಥೆಗಳು ಅವರದ್ದೇ ಆದಂಥ ತತ್ವಗಳನ್ನು ಜನರ ಮೇಲೆ ಹೇರಲು ಇಂಥ ಘಟನೆಗಳಲ್ಲಿ ಅವರು ಭಾಗಿಗಳಾಗಿ ಪ್ರಚೋದನೆ ನೀಡಿ ಧರ್ಮದ, ಜಾತಿಯ ಹೆಸರಿನ ಮೇಲೆ ಸಮಾಜವನ್ನು ಇಬ್ಭಾಗ ಮಾಡತಕ್ಕ ಕೆಲಸ ಮಾಡುತ್ತಿದ್ದಾರೆಂದು ನಾನು ಹೇಳಿದ್ದು. ಇದು ತಮಗೂ ಗೊತ್ತಿದೆ. 28ರಂದು ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾದ ಘಟನೆ 29ರಂದು ಒಂದು ರೂಪತಾಳಿ 30 ಮತ್ತು 31ರಂದು ವಿಪರೀತಕ್ಕೆ ಹೋಯಿತು, ಆಗ ಸರ್ಕಾರ ಏನು ಮಾಡುತ್ತಿತ್ತು? ಅಲ್ಲಿದ್ದ ಪೋಲೀಸ್ ವರಿಷ್ಠರು ಏನು ಮಾಡುತ್ತಿದ್ದರು?

SRI J.H. PATIL : Ascertain the facts. ಆಗ ನಾನು ದೆಹಲಿಯಲ್ಲಿದ್ದೆ. ಇದರ ಬಗ್ಗೆ ನನಗೆ ಮಾಹಿತಿ ಬಂದ ತಕ್ಷಣ ನಾಲ್ಕು ಜನ ನನ್ನ ಕ್ಯಾಬಿನೆಟ್ ಸಚಿವರಿಗೆ, ಡಿ.ಜಿ.ಪಿ., ಸಂಬಂಧಪಟ್ಟ ಹಿರಿಯ ಪೋಲೀಸ್ ಅಧಿಕಾರಿಗಳು the same senior police officers were there, at the moment. ಅನಂತರ ನಾನು 3ನೇ ತಾರೀಖು ಬೆಂಗಳೂರಿಗೆ ಬಂದೆ. ಆಗ ಬಹಳ ಗಂಭೀರವಾದ ಪರಿಸ್ಥಿತಿ ಇತ್ತು. ಅದಕ್ಕೆ ಯಾರು ಕಾರಣರು, ಎಲ್ಲಿಂದ ಬಂದರು, ಕೆಲವರು ವಿದೇಶದ ಕೈವಾಡವಿದೆಯೆಂದಿದ್ದಾರೆ. ಈಗಲೂ ಅಲ್ಲಿ ಯಾವುದೇ ರಾಜಕೀಯ ಪಕ್ಷದ ಪಾಲುಗಾರಿಕೆ ಆ ಸಮಯದಲ್ಲಿ ಇರಲಿಲ್ಲವೆಂಬುದು ನನಗೆ ಕನ್‌ವಿನ್ಸ್ ಆಗಿದೆ. ನಾನು ಆ ಸ್ಥಳಗಳಿಗೆ ಹೋದಾಗ ಬಿ.ಜೆ.ಪಿ.ಯ ಎಂ.ಪಿ. ಮತ್ತು ಎಂ.ಎಲ್.ಎ.ಗಳನ್ನು ಭೇಟಿ ಮಾಡಿಯೇ ಬಂದಿದ್ದೇನೆ. we examined the spot together. ಕಾಂಗ್ರೆಸ್ ಮತ್ತು ಎಲ್ಲಾ ಪಕ್ಷದವರು ಇದ್ದರು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಮತ್ತು ವೀರಪ್ಪಮೊಯ್ಲಿಯವರಿಗೆ ಹೇಳುವುದೇನೆಂದರೆ, ಹೇಗೋ ನ್ಯಾಯಾಂಗ ತನಿಖೆಯಾಗಿ ವರದಿ ಬಂದೇ ಬರುತ್ತದೆ, and we will

place it before the House. we can discuss it. Why go into the matter now and create excitement? Please apply your mind. I have no objection to hear the details; because having seen it was so disgusting, inhuman. ಆದ್ದರಿಂದ ಚರ್ಚೆ ಮಾಡುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. We are trying to solve ನಾವು ಪರಿಹಾರ ಮಾಡಲು ಪ್ರಯತ್ನ ಮಾಡೋಣ. ನಾವು ಎರಡೂ ಕಡೆ ಗ್ರೂಪ್ ಸಭೆಗಳನ್ನು ಮಾಡಿ, ಹಿಂದೂ, ಮುಸ್ಲಿಂ, ಯಾರ್ಯಾರು ಸಂಬಂಧಪಟ್ಟಿದ್ದಾರೆ ಅವರೊಂದಿಗೆ ಸಭೆ ಮಾಡೋಣ. Actually. Unidentified criminals; They were criminals, not members of any political parties. ಅವರನ್ನು ಹಿಡಿದು ಶಿಕ್ಷೆ ನೀಡಬೇಕು ಎಂಬ ನಿಟ್ಟಿನಲ್ಲಿ ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. We are at it.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಉಪಾಧ್ಯಕ್ಷರೆ, ಈಗ ಶಮನವಾಗಿರುವ ಪರಿಸ್ಥಿತಿಯನ್ನು ಇನ್‌ಸ್ಟಿಗೇಟ್ ಮಾಡಬೇಕು ಎಂಬ ದೃಷ್ಟಿಯಿಂದ ನಾನು ಮಾತನಾಡುತ್ತಿಲ್ಲ. ಅಂದರೆ, ಈ ಘಟನೆಗಳು ಇಡೀ ದೇಶದಲ್ಲೆಲ್ಲಾ ನಡೆದಿದೆ. ಇಂಥ ಜಾತ್ಯಾತೀತ ರಾಷ್ಟ್ರವನ್ನು ಒಡೆದು ಆಳಬೇಕು ಎನ್ನತಕ್ಕಂಥ ಜನರೇನಿದ್ದಾರೆ, ಅವರು ಆ ಕೆಲಸವನ್ನು ರಾಷ್ಟ್ರದ ಎಲ್ಲಾ ಕಡೆ ಮಾಡುತ್ತಿದ್ದಾರೆ. ಅಂಥ ಗುಂಪುಗಳನ್ನು ತಾವು ಪತ್ತೆ ಮಾಡಿ ಮೊದಲೆ ಏಕೆ ಶಿಕ್ಷೆ ಕೊಡಲಿಲ್ಲ? ಅಂತಹ ಎಲಿಮೆಂಟ್ಸ್ ಅನ್ನು ಮೊದಲೇ ಏಕೆ ಅರೆಸ್ಟ್ ಮಾಡಲಿಲ್ಲ? ಅಂಥವರನ್ನು ಒಳಗಡೆ ಏಕೆ ಇಡಲಿಲ್ಲ, ಎಂದು ಕೇಳುತ್ತಿದ್ದೇನೆ. 28ನೇ ತಾರೀಖಿನಂದು ಒಂದು ಸಣ್ಣ ಘಟನೆಯಾಗಿ ಪ್ರಾರಂಭವಾಯಿತು. ಒಂದು ಹುಡುಗ ಯಾವುದೋ ಒಂದು ಹುಡುಗಿಯನ್ನು ಚುಡಾಯಿಸಿದಂಥ ಘಟನೆ, ಇದು ಬೆಳೆದುಕೊಂಡು 29, 30, 31ಕ್ಕೆ ಬಹಳ ವಿಪರೀತವಾಗಿ ಹೋಗಿತಲ್ಲ ಆಗ ಏಕೆ ಅಲ್ಲಿನ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿದ್ದರು? ಏಕೆ ಪೋಲೀಸ್ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಲಿಲ್ಲ? ಅದನ್ನು ತಪ್ಪಿಸಬಹುದಾಗಿತ್ತಲ್ಲಾ? ಆಗ ಏಕೆ ಅಲ್ಲಿ ಅಧಿಕಾರಿಗಳು

1-40 ಪಿ.ಎಂ.

ಕಣ್ಣುಮುಚ್ಚಿ ಕುಳಿತಿದ್ದರು, ಏಕೆ ಪೋಲೀಸ್ ಅಧಿಕಾರಿಗಳು ಕ್ರಮವನ್ನು ಜರುಗಿಸಲಿಲ್ಲ? ಇದನ್ನು ಅವಾಯ್ಡ್ ಮಾಡಬಹುದಿತ್ತು. ಇದು ಒಂದು. ಎರಡನೆಯದಾಗಿ, ರಾಜಕೀಯ ಪಕ್ಷಗಳನ್ನು ಯಾರೂ ಬ್ಲೇಮ್ ಮಾಡುತ್ತಿಲ್ಲ. ಅಲ್ಲಿನ ಸ್ಥಳೀಯರು, ಎಂ.ಎಲ್.ಎ. ಅಂಥ ಪಾರ್ಟಿಯವರು ಅಥವಾ ಇಂಥ ಪಾರ್ಟಿಯವರು ಮಾಡಿದ್ದಾರೆ ಎನ್ನುವುದನ್ನು ನಾನು ಹೇಳುತ್ತಿಲ್ಲ. ಆದರೆ ಕೆಲವು ಸಂಘಸಂಸ್ಥೆಗಳು ಒಂದು ವಿಶಿಷ್ಟವಾದಂಥ ತತ್ವಜ್ಞಾನವನ್ನು ಇಟ್ಟುಕೊಂಡು ಮಾಡಿದ್ದಾರೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ,

ಅವರು ಕೇವಲ ಐಡೆಂಟಿಫೈಡ್ ಮನೆಗಳಿಗೆ ಮಾತ್ರ ಹೋಗಿದ್ದಾರೆ. ತಾವೂ ನೋಡಿದ್ದೀರಿ. ಕೆಲವು ಮನೆಗಳು ಇಂಟೀರಿಯರ್ ನಲ್ಲಿವೆ. ಆರೀತಿ ಇಂಟೀರಿಯರ್‌ನಲ್ಲಿರತಕ್ಕಂಥ ಮನೆಗೆ ಹೋಗಿ ಆ ಮನೆಯೊಂದಕ್ಕೇ ಬೆಂಕಿ ಹಚ್ಚಿ ವಾಪಸ್ಸು ಬಂದಿದ್ದಾರೆ. ಅಕ್ಕಪಕ್ಕದಲ್ಲಿ ಬೇರೆ ಮನೆಗಳು ಇರಲಿಲ್ಲವೇ? ಕೆಲವೇ ಅಂಗಡಿಗಳನ್ನು ಐಡೆಂಟಿಫೈ ಮಾಡಿ ಬೆಂಕಿ ಹಚ್ಚಿದ್ದಾರೆ. ರಿಟ್ಯಾಲಿಯೇಟ್ ಆಗಿದ್ದರೆ ಎಷ್ಟು ಅನಾಹುತ ಆಗುತ್ತಿತ್ತು. ಒನ್ ಸೈಡೆಡ್‌ನೆಸ್ ಅಟ್ಯಾಕ್ ನಡೆದಿದ್ದಕ್ಕಾಗಿ ಅದು ಒಂದು ರೀತಿಯಲ್ಲಿ ಶಮನವಾಯಿತು. ಒಂದು ವೇಳೆ ಎರಡೂ ಕಡೆಯಿಂದ ಘರ್ಷಣೆ ಪ್ರಾರಂಭವಾಗಿದ್ದರೆ ದೊಡ್ಡ ಅನಾಹುತವಾಗುತ್ತಿತ್ತು. ನಾನು ಹೇಳುತ್ತೇನೆ, ಈ ಅನಾಹುತವನ್ನು ತಪ್ಪಿಸಲು ಅಲ್ಲಿನ ಎಸ್.ಪಿ.ಯವರು ನಿಜವಾಗಲೂ ನಿರ್ಲಕ್ಷ್ಯ ತೋರಿದ್ದಾರೆ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅವರು ಯಾವುದೇ ರೀತಿಯಿಂದ ಪ್ರಿಕಾಷನ್ ತೆಗೆದುಕೊಳ್ಳಲಿಲ್ಲ ಮತ್ತು ಯಾವ ರೀತಿಯಾದ ಹಿಡಿತವೂ ಕೂಡ ಅವರ ಮೇಲೆ ಇಲ್ಲ. ನಿಮಗೇ ಗೊತ್ತಿರುವ ಹಾಗೆ ಬೊಂಬಾಯಿಯಲ್ಲಿರತಕ್ಕಂಥ ಸಮಾಜ ಘಾತುಕ ಶಕ್ತಿಗಳು ಇವತ್ತು ಹೆಚ್ಚಿನ ಸಂಖ್ಯೆಯಲ್ಲಿ ದಕ್ಷಿಣ ಕನ್ನಡಕ್ಕೆ ಬರುತ್ತಿದ್ದಾರೆ. ಉಡುಪಿ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರು ಅಲ್ಲಿ ಕ್ರೈಮ್ ಮಾಡುವುದು, ಇಲ್ಲಿಗೆ ಓಡಿ ಬರುವುದು ಆಗಿದೆ. ಅವರಿಗೆ ಇಲ್ಲಿ ಯಾರೂ ಕೇಳುವವರಿಲ್ಲ, ಹೇಳುವವರಿಲ್ಲ ಎನ್ನುವ ಹಾಗೆ ಆಗಿದೆ. ಹಾಗಾಗಿ ಇವತ್ತು ಈ ಘಟನೆಗೆ ಪ್ರಚೋದನೆ ಮಾಡಿದಂಥ ಸಮಾಜ ಘಾತುಕ ಶಕ್ತಿಗಳೂ ಕೂಡ ಅಲ್ಲಿ ಇದ್ದಾರೆ. ಅದಕ್ಕಾಗಿ ಇವತ್ತಿನ ದಿನ ನಾನು ನಿಮಗೆ ಕೇಳತಕ್ಕಂಥಾದ್ದು ಇಷ್ಟೇ, ಅಲ್ಲಿ ಸತ್ತವರಿಗೆ ಒಂದು ಲಕ್ಷ ರೂಪಾಯಿ ಪರಿಹಾರ ಕೊಟ್ಟಿದ್ದಾರೆ. ಆದರೆ ಯಾರು ಆಸ್ತಿ ಕಳೆದುಕೊಂಡಿದ್ದಾರೆ, ಮನೆ ಕಳೆದುಕೊಂಡಿದ್ದಾರೆ, ತಮ್ಮ ಅಂಗಡಿ ಕಳೆದುಕೊಂಡಿದ್ದಾರೆ ಅಂಥವರಿಗೆ ಸರ್ಕಾರ ಏನು ಕಾಂಪನ್‌ಸೇಷನ್ ಕೊಡುತ್ತೇನೆ ಎಂದು ಡಿಕ್ಲೇರ್ ಮಾಡಿತ್ತು, ಅದು ಇದುವರೆಗೆ ಯಾವ ರೂಪದಲ್ಲೂ ಇನ್ನೂ ಅವರಿಗೆ ಸಿಕ್ಕಿಲ್ಲ, ಮತ್ತು ಇದಕ್ಕೆ ಪ್ರಚೋದನೆ ಮಾಡತಕ್ಕಂಥ ಯಾವ ಸಂಘ ಸಂಸ್ಥೆಗಳಿದ್ದವು, ಆ ಸಂಘಸಂಸ್ಥೆಗಳ ಮುಖಂಡರನ್ನು ಸರ್ಕಾರ ಇನ್ನೂ ಅರೆಸ್ಟ್ ಮಾಡಿಲ್ಲ. ನೀವು ಮಾಡುತ್ತಿರುವ ಜ್ಯುಡಿಷಿಯಲ್ ಪ್ರೋಬ್ 1-2-3-4 ವರ್ಷ ನಡೆಯುತ್ತದೆ. ಏಕೆಂದರೆ ಇನ್ನೂ ಭಟ್ಕಳ ಘಟನೆಯ ಜ್ಯುಡಿಷಿಯಲ್ ಪ್ರೋಬ್ ಹೊರಗಡೆ ಬಂದಿಲ್ಲ. ಇಂಥ ಘಟನೆಗಳ ವರದಿ ಬರಬೇಕಾದರೆ ಸಾಕಷ್ಟು ಸಮಯವಾಗುತ್ತದೆ, ಜನರೂ ಅದನ್ನು ಮರೆತು ಹೋಗುತ್ತಾರೆ. ಇನ್ನು ಮುಂದೆ ಚುನಾವಣೆಗಳು ಬರುತ್ತವೆ. ಆ ಚುನಾವಣೆಗಳಲ್ಲಿ ಅನೇಕ ಜನ ಇದರ ಉಪಯೋಗ ಮಾಡಿಕೊಳ್ಳಬೇಕು ಎನ್ನತಕ್ಕಂಥವರು ಇರುತ್ತಾರೆ. ಅದಕ್ಕಾಗಿ ಈಗ ತಾವು ಅವರ ಬೇರು ಎಲ್ಲಿದೆ ಎನ್ನುವುದನ್ನು ಕಂಡು ಹಿಡಿಯದೇ ಹೋದರೆ, ನೀವು ಅದನ್ನು ಬೇರು ಸಹಿತ ಕಿತ್ತು ಹಾಕಲು ಆಗುವುದಿಲ್ಲ. ನಾನು ಅವರ ಒಂದೆರಡು ಹೆಸರುಗಳನ್ನು ತೆಗೆದುಕೊಂಡು ಏಕೆ ಹೇಳಿದೆ ಎಂದರೆ,

ಇದು ಎಲ್ಲರಿಗೂ ಗೊತ್ತಿದೆ, ತಮಗೂ ಕೂಡ ಗೊತ್ತಿದೆ, ತಮ್ಮ ಮಂತ್ರಿಮಂಡಲದ ಸದಸ್ಯರನ್ನು ಮತ್ತು ತಮ್ಮ ಪಾರ್ಟಿ ಜನರನ್ನು ಕೇಳಿದರೂ ಹೇಳುತ್ತಾರೆ, ಇದರಲ್ಲಿ ಯಾರ ಕೈವಾಡವಿದೆ, ಯಾರು ಇದರ ಹಿನ್ನಲೆಯಲ್ಲಿದ್ದಾರೆ ಎನ್ನತಕ್ಕಂಥಾದ್ದನ್ನು ಹೇಳುತ್ತಾರೆ. ನಾವು ಪಬ್ಲಿಕ್ ಕನ್‌ಸಂಪ್ಷನನ್ ಗೋಸ್ಕರ ಹೇಳುತ್ತಿರಬಹುದು, ಅದನ್ನು ನಾನು ಒಪ್ಪುತ್ತೇನೆ. ಏಕೆ ನಾನು ಹೇಳಿ ಸುಮ್ಮನೆ ನಿಷ್ಠುರ ಕಟ್ಟಿಕೊಳ್ಳಲಿ ಅಥವಾ ನಾನು ಹೇಳಿ ಏಕೆ ಪುನಃ ಪ್ರಚೋದನೆ ಮಾಡುವುದು . ಎನ್ನತಕ್ಕಂಥ ದೃಷ್ಟಿಯಿಂದ ಹೇಳಿದ್ದರೆ ಅದು ಬೇರೆ ವಿಷಯ. ಆದರೆ ಮಾಡಿದಂಥಾದ್ದು ನಿಜ, ಅದರ ಹಿನ್ನಲೆ ನಿಜ. ಅಲ್ಲಿ ಓಣಿ ಓಣಿಗಳಿಗೆ ಹೋಗಿ ಭಾಷಣ ಮಾಡಿದಂಥ ಸಂಘಸಂಸ್ಥೆಗಳು ಯಾವುವು ಎಂದು ನೀವು ನಿಮ್ಮ ಇಂಟಲಿಜೆನ್ಸ್ ರಿಪೋರ್ಟ್, ಪೋಲೀಸ್ ರಿಪೋರ್ಟ್ ತರಿಸಿ ನೋಡಿ. ಇಂಟಲಿಜೆನ್ಸ್ ರಿಪೋರ್ಟ್ ಪ್ರತಿದಿನ ಸಾಯಂಕಾಲ ನಿಮಗೆ ಬರುತ್ತದೆ, ಪ್ರತಿದಿವಸ ನಿಮಗೆ ಕೊಡುತ್ತಾರೆ. ಅದರಲ್ಲಿ ಯಾರ ಯಾರ ಹೆಸರು ಇದೆ ಎನ್ನುವುದನ್ನು ಹೇಳಿ. ನೀವು ಇಲ್ಲ ಎಂದು ಹೇಳಿದರೆ ನಾನು ಸುಮ್ಮನೆ ಇರುತ್ತೇನೆ. ಅದರಲ್ಲಿ ನಾನು ನಮೂದು ಮಾಡಿರುವವರ ಪೈಕಿ ಸದಸ್ಯರು ಒಬ್ಬರೂ ಇಲ್ಲ ಎಂದು ನಿಮಗೆ ಮನವರಿಕೆಯಾಗಿದ್ದರೆ ನಾನು ಒಂದು ಚಕಾರ ಶಬ್ಧವನ್ನೂ ಕೂಡ ಎತ್ತುವುದಿಲ್ಲ, ನಾನು ಸುಮ್ಮನಾಗುತ್ತೇನೆ. ಇದ್ದರೆ, ಅದನ್ನು ನಾನು ಹೇಳಬೇಕಾಗುತ್ತದೆ, ನೀವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇವರು ಹೇಳಬಹುದು, ಎಂಟನೇ ತಾರೀಖು ಸೋನಿಯಾ ಗಾಂಧಿಯವರು ಬಂದು ಏನು ಮಾಡಿದರು, ಪ್ರಚೋದನೆ ಮಾಡಿದರು ಎಂದು. ಆದರೆ ಕೆಲವು ಮುಖಂಡರ ಭಾಷಣವು ಯಾವಾಗಲೂ ಹಾಗೆಯೇ ಇರುತ್ತದೆ. ಅವರು ಮಾತನಾಡುವುದು ಹಾಗೆಯೇ. ಏಕೆಂದರೆ ಅವರಿಂದ ಅವರಿಗೆ ಭಯ ಇದೆ. ಆದ್ದರಿಂದ ಸಹಜವಾಗಿ ಅವರು ಅವರ ಹೆಸರನ್ನು ಹೇಳುತ್ತಾರೆ. ಆದರೆ ನಾನು ಕೇಳುತ್ತೇನೆ, ಇಲ್ಲಿ 1, 2, 3 ಮತ್ತು 4ನೇ ತಾರೀಖು ಎಕ್ಸಿಕ್ಯುಟೀವ್ ಕಮಿಟಿ ಮೀಟಿಂಗ್ ಇತ್ತು. ಬಿ.ಜೆ.ಪಿ.ಯ ಅನೇಕ ಮುಖಂಡರು, ರಾಷ್ಟ್ರಮಟ್ಟದ ನಾಯಕರು, ಪ್ರಧಾನ ಮಂತ್ರಿಗಳು, ಗೃಹ ಸಚಿವರು ಎಲ್ಲರೂ ಇದ್ದರು. ಅವರೆಲ್ಲಾ ಅಲ್ಲಿಗೆ ಹೋಗಿ ಏನು ನಡೆದಿದೆ ಎಂದು ನೋಡಬಹುದಿತ್ತು. ಬೇರೆ ಕಡೆಗೆ ಹೋಗಿ ನೋಡುವುದಕ್ಕಾಗುತ್ತದೆ, ಇಲ್ಲಿ ಬಂದು ನೋಡುವುದಕ್ಕೆ ಆಗುತ್ತಿರಲಿಲ್ಲವೇನು? ಏಕೆಂದರೆ ನಿಮಗೆ ಹೆಲಿಕಾಪ್ಟರ್ ವ್ಯವಸ್ಥೆ ಇದೆ, ಡಿಫೆನ್ಸ್ ಹೆಲಿಕಾಪ್ಟರ್ ವ್ಯವಸ್ಥೆ ಇದೆ, ಕೇಂದ್ರ ಸಚಿವರುಗಳಿಗೆ ಎಲ್ಲಾ ವ್ಯವಸ್ಥೆಯೂ ಕೂಡ ಇದೆ. ಎಲ್ಲರೂ ಹೋಗಬಹುದಾಗಿತ್ತಲ್ಲಾ, ಹೋಗಿ ನೋಡಿಕೊಂಡು ಬರು, ಇದು ತಪ್ಪೋ ಸರಿಯೋ ಎನ್ನತಕ್ಕಂಥಾದ್ದನ್ನು ಹೇಳಬಹುದಾಗಿತ್ತು. ಆದರೆ ನೀವು ಹೋಗಲಿಲ್ಲ. ಆದರೆ ಹೋದವರಿಗೆ, ಅವರು ಅಲ್ಲಿ ಏಕೆ ಹೋದರು, ಇವರು ಏಕೆ ಬಂದರು ಎಂದು ಹೆಸರು ಇಡುವುದು ಮಾಡುತ್ತಿದ್ದಾರೆ. ನಾನು ಅಲ್ಲಿಗೆ ಎರಡನೇ ತಾರೀಖು ಹೋದೆ. ಒಂದನೇ ತಾರೀಖು ಮಂತ್ರಿಗಳು ಹೋಗಿದ್ದರು. ನಾನು

ಹೋಗುವಾಗ ಕೂಡ, ಇಲ್ಲಿಗೆ ಬರಬೇಡಿ, ಇನ್ನೂ ವಾತಾವರಣ ಚೆನ್ನಾಗಿಲ್ಲ ಎಂದು ನನಗೆ ಹೇಳಿದರು. ನಾನು ಡಿ.ಐ ಜಿ.ಯವರನ್ನು, ಐ.ಜಿಯವರನ್ನು, ಡಿ.ಸಿ.ಪಿ.ಯವರನ್ನು, ಇಂಟಲಿಜೆನ್ಸ್‌ನವರನ್ನು ಕೇಳಿದೆ, ಅವರೆಲ್ಲರೂ ಕೂಡ ಹೋಗಬೇಡಿ, ಪರಿಸ್ಥಿತಿ ಅಷ್ಟು ಅನುಕೂಲವಿಲ್ಲ, ಒಂದೆರಡು ದಿವಸವಾದ ಮೇಲೆ ಹೋಗೋಣ ಎಂದು ಹೇಳಿದರು. ಆದರೂ ಕೂಡ ನಾನು ಅವರಿಗೆ ಹೇಳಿದೆ, ನಾನು ಹೋಗಲೇ ಬೇಕಾಗುತ್ತದೆ, ಮಂತ್ರಿಗಳು ಹೇಗಬಹುದು, ನಮಗೆ ಮಾತ್ರ ಅವಕಾಶವಿಲ್ಲವೆಂದರೆ ಹೇಗೆ ಎಂದು ಕೇಳಿ ಕೊನೆಗೆ ನಾನು ಅಲ್ಲಿಗೆ ಹೋದೆ. ನಾನು ಅನೇಕ ಆಸ್ಪತ್ರೆಗಳಿಗೂ ಭೇಟಿ ಕೊಟ್ಟೆ. ಆಸ್ಪತ್ರೆಗಳಲ್ಲಿ 57 ಜನ ಇದ್ದರು. ಯೂನಿಟಿ ಆಸ್ಪತ್ರೆ, ಸರ್ಕಾರಿ ಆಸ್ಪತ್ರೆ ಮತ್ತು ಬೇರೆ ನಾಲ್ಕು ಖಾಸಗಿ ಆಸ್ಪತ್ರೆಗಳಲ್ಲಿ ಜನ ಇದ್ದರು. ಏನೂ ಸಂಬಂಧವಿಲ್ಲದಂಥ ಜನರಿಗೆ ಹೊಡೆದಿದ್ದಾರೆ. ಅವರಲ್ಲಿ ಕೆಲವು ಹಿಂದೂ ಜನಗಳೂ ಇದ್ದಾರೆ. ಘಟನೆಗೂ ಅವರಿಗೂ ಸಂಬಂಧವಿಲ್ಲ. ಹೀಗಾಗಿ ಹಿಂದೂ ಮುಸಲ್ಮಾನರಲ್ಲಿ ಜಗಳ ಹಚ್ಚತಕ್ಕಂಥಾದ್ದು ನಡೆದಿದೆ. ಈ ಘಟನೆಯನ್ನು ಸೃಷ್ಟಿ ಮಾಡಿದಂಥವರು ಯಾರು ಎನ್ನುವುದಷ್ಟನ್ನೇ ನಾನು ಕೇಳುತ್ತಿದ್ದೇನೆ. ನಾನು ಯಾರ ಮೇಲೂ ದೋಷ ಹೊರಿಸುವವನಲ್ಲ. ಸಂಘಸಂಸ್ಥೆಗಳು ಅದರಲ್ಲಿ ಇಲ್ಲ ಎಂದರೆ ಅವರಿಗೆ ಶಹಭಾಸ್ ಗಿರಿಯನ್ನು ಕೊಡೋಣ. ಆದರೆ ನಿಮ್ಮ ಇಂಟಲಿಜೆನ್ಸ್ ರಿಪೋರ್ಟ್ ಪ್ರಕಾರ, ಅಲ್ಲಿನ ನಿಮ್ಮ ಸಿ.ಓ.ಡಿ. ರಿಪೋರ್ಟ್ ಪ್ರಕಾರ, ಅಲ್ಲಿನ ನಿಮ್ಮ ಪೋಲೀಸ್ ವರದಿ ಪ್ರಕಾರ ಅಥವಾ ಅಲ್ಲಿನ ನಿಮ್ಮ ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ಪ್ರಕಾರ ಆ ಸಂಘಸಂಸ್ಥೆಗಳು ಅದರಲ್ಲಿ ಇದ್ದರೆ ನೀವು ಏನು ಕ್ರಮವನ್ನು ಜರುಗಿಸುತ್ತೀರಿ ಎನ್ನುವುದನ್ನು ಈಗ ಹೇಳಬೇಕು. ಏಕೆಂದರೆ ಜ್ಯುಡಿಷಿಯಲ್ ಪ್ರೋಬ್ ರಿಲೀಫ್ ಒಂದೆರಡು ವರ್ಷದ ಮೇಲೆ ಬರುತ್ತದೆ. ಅದಕ್ಕಾಗಿ ದಯವಿಟ್ಟು ನೀವು ಅವುಗಳ ಮೇಲೆ ಏನು ಕ್ರಮವನ್ನು ಜರುಗಿಸಿದ್ದೀರಿ? ತೊಂದರೆಯಾದಂಥ ಜನರಿಗೆ ಎಷ್ಟು ಪರಿಹಾರ ಕೊಟ್ಟಿದ್ದೀರಿ?ಛ ಮತ್ತು ರೀಹ್ಯಾಬಿಲಿಟೇಷನ್ ಮಾಡತ್ತಕಂಥ ಯಾವ ಕಾರ್ಯಕ್ರಮಗಳನ್ನು ಹಾಕಿದ್ದೀರಿ? ಎಂದು ಹೇಳತಕ್ಕಂಥಾದ್ದು ಆಗಬೇಕು ಮತ್ತು ಕೆಲವು ಜನರ ಮೇಲೆ ಅನ್ಯಾಯವಾಗಿ ನಡೆದಿರುವಂಥ ಜನರಿಗೆ ಎಷ್ಟು ಪರಿಹಾರ ಕೊಟ್ಟಿದ್ದೀರಿ? ಮತ್ತು ರೀಹ್ಯಾಬಿಲಿಟೇಷನ್ ಮಾಡತಕ್ಕಂಥ ಯಾವ ಕಾರ್ಯಕ್ರಮಗಳನ್ನು ಹಾಕಿದ್ದೀರಿ? ಎಂದು ಹೇಳತಕ್ಕಂಥಾದ್ದು ಆಗಬೇಕು ಮತ್ತು ಕೆಲವು ಜನರ ಮೇಲೆ ಅನ್ಯಾಯವಾಗಿ ನಡೆದಿರುವಂಥ ದಬ್ಬಾಳಿಕೆ ಬಗ್ಗೆ ಯಾವ ಕಾರ್ಯಕ್ರಮವನ್ನು ಸರ್ಕಾರ ಜರುಗಿಸಿದೆ ಎನ್ನತಕ್ಕಂಥಾದ್ದನ್ನೂ ಕೂಡ ಸ್ಪಷ್ಟವಾಗಿ ಹೇಳಬೇಕು. ನಾನು ತಮಗೆ ಕಳಕಳಿಯಿಂದ ಕೇಳುತ್ತಿದ್ದೇನೆ, ಈ ರಾಜ್ಯದಲ್ಲಿ ಈ ವರ್ಷವಂತೂ ನಾವು ಬಹಳ ಕಾಷಿಯಸ್ ಆಗಿರಬೇಕು. ಏಕೆಂದರೆ ಯಾವುದಾದರೂ ಒಂದು ಎಲಿಮೆಂಟ್, ಎಲ್ಲಾದರೂ ಒಂದು ಕಡೆ ಬೆಂಕಿ ಇಟ್ಟು ಜಗಳ ಹಚ್ಚತಕ್ಕಂಥ ಪ್ರಯತ್ನವನ್ನು ಮಾಡೇ ಮಾಡುತ್ತಾರೆ. ಅದು ಧರ್ಮದ ಹೆಸರಿನಲ್ಲಿ ಆಗಬಹುದು, ಭಾಷೆಯ ಹೆಸರಿನಲ್ಲಿ ಆಗಬಹುದು, ಬೇರೆ

ಹೆಸರಿನಲ್ಲಿ ಆಗಬಹುದು ಅಥವಾ ಬಡವ ಮತ್ತು ಶ್ರೀಮಂತ ಎನ್ನತಕ್ಕಂಥ ಘರ್ಷಣೆ ಇವೆಲ್ಲವನ್ನೂ ತರುತ್ತದೆ. ಒಂದಕ್ಕೊಂದನ್ ಜೋಡಿಸಿ ಬಹಳಷ್ಟು ಅನಾಹುತ ಆಗತಕ್ಕಂಥಾದ್ದು ಮತ್ತು ಅದರಿಂದ ರಾಜಕೀಯ ಲಾಭವನ್ನು ಪಡೆದುಕೊಳ್ಳಬೇಕು ಎನ್ನತಕ್ಕಂಥ ಸಂಘಸಂಸ್ಥೆಗಳೂ ಇವೆ, ಪಕ್ಷಗಳೂ ಇವೆ. ಅದಕ್ಕೆ ನಿಮ್ಮ ತಯಾರಿ ಏನು? ಅದಕ್ಕೆ ನೀವು ಏನು ಮಾಡಿದ್ದೀರಿ ಎನ್ನತಕ್ಕಂಥಾದ್ದನ್ನು ನಿಮ್ಮ ಮಾತಿನಲ್ಲಿ ಹೇಳತಕ್ಕಂಥಾದ್ದೂ ಕೂಡ ಬಹಳ ಅವಶ್ಯಕವಾಗಿದೆ. ನನ್ನ ಹತ್ತಿರ ಹೆಸರುಗಳೂ ಕೂಡ ಇವೆ. ಆದರೆ ಅದನ್ನು ಹೇಳುವುದರಿಂದ ಪ್ರಿಜ್ಯುಡೀಸ್ ಆಗುತ್ತದೆ. ಅಂಥವರು ಅದರಲ್ಲಿ ಇದ್ದಾರೋ, ಇಲ್ಲವೋ ಎನ್ನುವುದು ಗೊತ್ತಿಲ್ಲ, ವಿಚಾರಣೆ ಮಾಡಿಯೇ ಹೇಳಬೇಕು ಎಂದು ತಾವು ಹೇಳಿರುವುದರಿಂದ ನಾನು ಅದರ ವಿಚಾರಕ್ಕೆ ಹೋಗುವುದಿಲ್ಲ. ಪ್ರಚೋದನೆಯನ್ನು ಕೂಡ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಹೇಳುವುದು ಇಷ್ಟೇ, ಈ ಒಂದು ಘಟನೆ ಆಗುತ್ತದೆ ಎಂದು ಕಂಡುಹಿಡಿಯುವಲ್ಲಿ ನಿಷ್ಕಾಳಜಿ ಮತ್ತು ವೈಫಲ್ಯವಿದೆ ಮತ್ತು ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್ ಪೂರ್ಣ ವಿಫಲವಾಗಿದೆ. ಅದಕ್ಕೆ ನೀವು ಏನು ಕ್ರಮವನ್ನು ಜರುಗಿಸಿದ್ದೀರಿ ಮತ್ತು ಆ ವಿಫಲತೆಯನ್ನು ನೀವು ಒಪ್ಪಿಕೊಳ್ಳಬೇಕಾಗುತ್ತದೆ ಏಕೆಂದರೆ, ನಾನು ಮುಖ್ಯಮಂತ್ರಿ, ನನ್ನ ತಪ್ಪನ್ನು ನಾನು ಹೇಗೆ ಒಪ್ಪಿಕೊಳ್ಳುವುದು ಎಂದರೆ ಕಷ್ಟವಾಗುತ್ತದೆ. ಏಕೆಂದರೆ, ಅಲ್ಲಿ ತಪ್ಪಾಗಿದೆ ಎನ್ನುವುದನ್ನು ನೀವು ನೇರವಾಗಿ ಹೇಳುತ್ತೀರಿ. ಹಾಗೆಯೇ ಇಲ್ಲಿಯೂ ಕೂಡ ಹೇಳಬೇಕಾಗುತ್ತದೆ. ನಾನು ಅವರ ಹೆಸರು ಕೇಳುವುದಿಲ್ಲ. ಸಂಘಸಂಸ್ಥೆಗಳೂ ಅದರಲ್ಲಿ ಇನ್ ವಾಲ್ವ್ ಆಗಿವೆ ಎಂದರೆ ಅಷ್ಟು ಸಾಕು. ಆಗ ಇನ್ನು ಮುಂದಾದರೂ ಇಂಥ ಘಟನೆಗಳೂ ನಡೆದಾಗ, ಇಂಥ ಸಂಘ ಸಂಸ್ಥೆಗಳ ಮೇಲೆ ಪ್ರಿಕಾಷನ್ ತೆಗೆದುಕೊಳ್ಳುವುದಕ್ಕೆ ಆಗುತ್ತದೆ. ಕೆಲವು ಸಲ ಏನಾಗುತ್ತದೆ ಎಂದರೆ, ಯಾವುದೋ ಇಂಥ ಒಂದು ಘಟನೆ ನಡೆಯುತ್ತದೆ ಎಂದರೆ, ಈ ಸಮಾಜಘಾತುಕ ಶಕ್ತಿಗಳು ಅದರಲ್ಲಿ ಇನ್‌ವಾಲ್ವ್ ಆಗುವಂತಿದ್ದರೆ ಆ ಜನರನ್ನು ಒಳಗೆ ಹಾಕಿಬಿಡುತ್ತಾರೆ. ಆದರೆ ಅವತ್ತಿನ ದಿವಸ ಈ ಕೆಲಸವನ್ನು ಪೊಲೀಸ್‌ನವರು ಮಾಡಲಿಲ್ಲ. ಯಾವಾಗಲೂ ಸಮಾಜ ಘಾತುಕ ಕೃತ್ಯಗಳಲ್ಲಿ ತೊಡಗುವಂಥ 10-15 ಜನರು (ಸೋಸ್ ಪೀಪಲ್) ಇರುತ್ತಾರೆ, ಅಂಥ ಜನರನ್ನು ಕೂಡ ಅರೆಸ್ಟ್‌ಮಾಡಿ ಜೈಲಿಗೆ ಹಾಕುವಂಥ ಕೆಲಸ ಆ ಸಂದರ್ಭದಲ್ಲಿ ಆಗಿಲ್ಲ. ಈ ಕೆಲಸ 1-12-98 ಅಥವಾ 30-11-98ರ ಒಳಗಡೆ ಆಗಿಲ್ಲ. ಆದ್ದರಿಂದ ಈ ಒಂದು ಪರಿಸ್ಥಿತಿ ಅಲ್ಲಿ ಉಲ್ಬಣಗೊಂಡು ಸಾರ್ವಜನಿಕರಿಗೆ ತೊಂದರೆ ಆಗಿದೆ. ಆದ್ದರಿಂದ ಇಂಥವನ್ನೆಲ್ಲಾ

(ಈ ಹಂತದಲ್ಲಿ ಅಧ್ಯಕ್ಷರು ಶ್ರೀ ರಮೇಶ್ ಕುಮಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕಂಡಿಹಿಡಿಯುವುದಕ್ಕೆ, ಶೋಧಿಸುವುದಕ್ಕೆ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಅಳವಡಿಸಿದ್ದೀರಿ? ಅಲ್ಲಿ ತೊಂದರೆಗೊಳಗಾದವರಿಗೆ ಯಾವ ರೀತಿಯಾಗಿ ಪರಿಹಾರ ಕೊಟ್ಟಿದ್ದೀರಿ ಮತ್ತು ಆ ಸಿಚ್ಯುಏಷನ್‌ನ್ನು ಹತೋಟಿಯಲ್ಲಿ ಇಡುವುದಕ್ಕೆ ಯಾವ ರೀತಿಯಾಗಿ ಪ್ರಯತ್ನವನ್ನು

ಮಾಡಿದ್ದೀರಿ ಎನ್ನತಕ್ಕಂಥದ್ದನ್ನು ಈ ಸದನಕ್ಕೆ ಮನವರಿಕೆ ಮಾಡಿಕೊಡಬೇಕು ಮತ್ತು ಈ ಘಟನೆಯ ಹಿಂದೆ ಯಾರ್‍ಯಾರು ಇನ್‌ವಾಲ್ವ್ ಆಗಿದ್ದಾರೆ. ಅವರ ಮೇಲೆ ಸರ್ಕಾರ ತಕ್ಷಣ ಕ್ರಮ ಜರುಗಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಂಡು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :— ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರಾದ ಮಾನ್ಯ ಖರ್ಗೆ ಅವರು ಪ್ರಸ್ತಾಪ ಮಾಡಿದಂಥ ಕಾಲದಲ್ಲಿ ಬಿ.ಜೆ.ಪಿ.ಯ ಯಾವುದೇ ಮುಖಂಡರು ಘಟನಾ ಸ್ಥಳಕ್ಕೆ ಹೋಗಲಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುವಂಥದ್ದು ಏನೆಂದರೆ...

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾನು ಹೇಳಿದ್ದು ಏನೆಂದರೆ ಬೆಂಗಳೂರಿನಲ್ಲಿ ಎಕ್ಸಿಕ್ಯೂಟೀವ್ ಕಮಿಟಿ ನಡೆದಿತ್ತು, ಪ್ರೈಮ್‌ಮಿನಿಸ್ಟರ್ ಹೋಂ ಮಿನಿಸ್ಟರ್ ಹೀಗೆ ಎಲ್ಲರೂ ಇದ್ದರೂ ಸಹ ಅಲ್ಲಿಗೆ ಯಾರೂ ಹೋಗಲಿಲ್ಲವೆಂದು ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಸನ್ಮಾನ್ಯ ಖರ್ಗೆಯವರು ಸದನದಲ್ಲಿ ಪ್ರಸ್ತಾಪ ಮಾಡಿದ ಹಾಗೆ ಮಂಗಳೂರು ಮತ್ತು ಸುರತ್ಕಲ್‌ನಲ್ಲಿ ಅಮಾನವೀಯ ಕಾರ್ಯ ನಡೆದಿದೆ. ಇದರ ಬಗ್ಗೆ ನ್ಯಾಯಾಂಗ ತನಿಖೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಆದೇಶ ಹೊರಡಿಸಿದ್ದಾರೆ. ಆ ಘಟನೆ ನಡೆದಂಥ ದಿವಸವೇ ಇಲ್ಲಿ ಅಖಿಲಭಾರತ ಅಧಿವೇಶನ ನಡೆಯುತ್ತಿದ್ದು, ಅದನ್ನು ತಪ್ಪಿಸಿ ನಮ್ಮ ಬಿಜೆಪಿ ರಾಜ್ಯಾಧ್ಯಕ್ಷರನ್ನು ಅದೇ ದಿವಸ ಬೆಳಿಗ್ಗೆ ಅಲ್ಲಿಗೆ ಕಳುಹಿಸಿಕೊಟ್ಟಿದ್ದೇವೆ. ಮತ್ತು ನಾನೂ ಕೂಡ ಘಟನಾ ಸ್ಥಳಕ್ಕೆ ಹೋಗಿ ಬಂದಿದ್ದೇನೆ. ಮತ್ತು ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿ ಅಲ್ಲಿಯ ವಾಸ್ತವಿಕವಾದ ಸ್ಥಿತಿಯನ್ನು ತಿಳಿದುಕೊಂಡು ಬಂದಿದ್ದಾರೆ. ನಾನು ಹೇಳುವುದೇನೆಂದರೆ, ಆಸ್ತಿಪಾಸ್ತಿಗಳು ಎಷ್ಟು ನಷ್ಟ ಆಗಿದೆಯೋ ಅಷ್ಟಕ್ಕೆ ಸರಿಯಾಗಿ ಪರಿಹಾರ ಸಿಗಬೇಕು. ಮತ್ತು ಇಂಥ ಒಂದು ಘಟನೆ ನಡೆಯುವುದಕ್ಕೆ ಕಾರಣರಾದ ಯಾರೇ ಆಗಲಿ, ಯಾರದೇ ಕೈವಾಡ ಇದ್ದರೂ ಅಂಥವರನ್ನು ಗುರುತಿಸಿ ಉಗ್ರವಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು. ಸನ್ಮಾನ್ಯ ಖರ್ಗೆಯವರು ಮಾತನಾಡುವಂಥ ಸಂದರ್ಭದಲ್ಲಿ ಯಾವನೋ ಒಬ್ಬ ಯುವಕ ಕ್ಷುಲ್ಲಕ ಕಾರಣಕ್ಕಾಗಿ ಯಾವುದೋ ಹುಡುಗಿಯನ್ನು ಎಳೆದಾಡಿದ, ಅದಕ್ಕಾಗಿ ಇದು ನಡೆಯಿತು. ಎನ್ನುವ ಮಾತನ್ನು ಹೇಳಿದರು. ಆದರೆ ಈ ಕಾರಣಕ್ಕಾಗಿ ಅಲ್ಲಿ ಅಂಥ ಘಟನೆ ನಡೆದುದಲ್ಲವೆಂದು ಹೇಳಬಹುದು. ಏಕೆಂದರೆ ಈ ತರಹ ಅನೇಕ ಘಟನೆಗಳು ಅಲ್ಲಿ ನಡೆಯುತ್ತಲೇ ಇರುತ್ತದೆ. ಹೆಣ್ಣು ಮಕ್ಕಳನ್ನು ಯಾರು ಬೇಕಾದರೂ ರಸ್ತೆಯಲ್ಲಿ ಏನು ಬೇಕಾದರೂ ಮಾಡಬಹುದು, ಎಳೆದಾಡಬಹುದು,

ಪೊಲೈಸ್ಡ್ ಮಾಡಬಹುದು, ಕೊಡಿಸಬಹುದು ಎನ್ನುವುದಾದರೆ ಅದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾಗರೀಕ ಸಮಾಜ ನಡೆಸುಕೊಳ್ಳುವಂಥದ್ದು ಅಲ್ಲ. ಆದ್ದರಿಂದ ಅದು ಆಗದಂತೆ ಎಚ್ಚರವಹಿಸಿ ರಕ್ಷಣೆ ಕೊಡಬೇಕಾದುದು ಎಲ್ಲರ ಕರ್ತವ್ಯ. ಈ ಹಿನ್ನೆಲೆಯಲ್ಲಿ ನ್ಯಾಯಾಂಗ ತನಿಖೆಯಲ್ಲಿ ಇವೆಲ್ಲವನ್ನು ಟರ್ಮ್ಸ್ ಆಫ್ ರೆಫರೆನ್ಸ್ ನಲ್ಲಿ ಹಾಕಬೇಕು. ಸರಿಯಾದಂಥ ತನಿಖೆ ಆಗಬೇಕು. ನಾವು ಒಬ್ಬ ಶಾಸಕರೊಬ್ಬರನ್ನು ಕಳೆದುಕೊಂಡಿದ್ದೇವೆ. ನ್ಯಾಯಾಂಗ ತನಿಖೆ ತಾವೇ ನಡೆಸಿ ಅದರ ವರದಿ ಇವತ್ತು ಸರ್ಕಾರದ ಮುಂದೆ ಇದೆ. ಅದನ್ನು ಸಭೆಯ ಮುಂದೆ ತರದೆ ಇಲ್ಲಿ ಚರ್ಚೆ ಮಾಡುವುದಕ್ಕ ಅವಕಾಶವಾಗುತ್ತಿಲ್ಲ. ಮುಂದೆ ಆದರೂ ಈ ತರಹ ಆಗದೆ ಸರಿಯಾದ ತನಿಖೆ ಆಗಬೇಕು ಎಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಅಧ್ಯಕ್ಷರು :— ಮಾನ್ಯ ಗೃಹಸಚಿವರೇ, ಇದರ ಬಗ್ಗೆ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಫೈನಲೈಸ್ ಮಾಡಿದ್ದೀರಾ? ನನ್ನ ಸಲಹೆ ಏನೆಂದರೆ ಟರ್ಮ್ಸ್ ಆಪ್ ರೆಫರೆನ್ಸ್‌ನ್ನು ಫೈನಲೈಸ್ ಮಾಡುವಾಗ ಲಾ ಮಿನಿಸ್ಟರ್ ಅವರ ಹತ್ತಿರ ಎಕ್ಸಾಮಿನ್‌ಮಾಡಿ ಆಕಸ್ಮಿಕವಾಗಿ ಎಲ್ಲೋ ಒಂದು ಕಡೆಗೆ ಭಾವನೆಗಳು ಕೆರಳಿ ಈ ತರಹದ ಘಟನೆಗಳು ಆಗುತ್ತವೆ, ಇದು ಒಂದು. ಇತ್ತೀಚಿನ ದಿನಗಳಲ್ಲಿ it appears to have become an industry. ಇಡೀ ದೇಶದ ಇತಿಹಾಸ ನೋಡಿದರೆ ಈ ತರಹದ ಗಲಭೆಗಳನ್ನು ಸೃಷ್ಟಿಮಾಡಿ ಇದರಿಂದ ತಮ್ಮದೇ ಆದಂಥ ಫಾಯಿದೆ ಪಡೆದುಕೊಳ್ಳತಕ್ಕಂಥ ಜನಗಳನ್ನೂ ಕೂಡ ನಾವು ಕಾಣುತ್ತಾ ಇದ್ದೇವೆ. Whether there are any people who have been systematically indulging in these things to flourish out of it, ಎನ್ನುವುದನ್ನು ಸ್ವಲ್ಪ ಎಕ್ಸಾಮಿನ್ ಮಾಡಿ. Try to incorporate the ಆ್ಯಂಟಿಸೋಶಿಯಲ್ ಎಲಿಮೆಂಟ್ಸ್ ಬಗ್ಗೆ ಮತ್ತೆ ಈ ಕಾಲರಾ ಮಲೇರಿಯಾ ಬಂದರೆ ಹೇಗೆ ಹೇಳುತ್ತೇವೆಯೋ ಹಾಗೆ ಈ ತರಹದ industrialists are there ಎಂದು ಹೇಳಿ ಜನರಿಗೆ ತಿಳುವಳಿಕೆ ಕೊಡಬಹುದಲ್ಲಾ.

+ ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂಥ ಒಂದು ಗಲಭೆ ನಡೆಯಿತ್ತಲ್ಲಾ ಎಂದು ದಕ್ಷಿಣ ಕನ್ನಡ ಜಿಲ್ಲೆಯ ಅವಿಭಾಜಿತ ಅಂಗವಾದ ಉಡುಪಿ ಜಿಲ್ಲೆಗೆ ಸಂಬಂಧಿಸಿದ ಶಾಸಕನಾದ ನನಗೆ ಬಹಳ ದುಃಖವಾಗುತ್ತದೆ. ಆದರೆ ವಿಶೇಷವಾಗಿ ನಾನು ಸರ್ಕಾರದ ಆಡಳಿತದ ವೈಫಲ್ಯವನ್ನು ತಮ್ಮ ಮುಂದಿಡಬಯಸುತ್ತೇನೆ. ಆಡಳಿತ ನಡೆಸುವಂಥ ಯಾವುದೇ ಸರ್ಕಾರಕ್ಕೆ ಅವರದೇ ಆದ ಪೊಲೀಸ್ ಇಲಾಖೆ ಮೂಲಕ ಮುಂದೆ ನಡೆಯಬಹುದಾದಂಥ ಘಟನೆಗಳನ್ನು ಪರಿಶೀಲನೆ ಮಾಡುವಂಥದ್ದು ಅಥವಾ ದೈನಂದಿನ ಕಾರ್ಯಕ್ರಮಗಳಲ್ಲಿ ರಾಜ್ಯದ ಗೃಹಸಚಿವರಾಗಲೀ, ಮಾನ್ಯ ಮುಖ್ಯಮಂತ್ರಿಗಳಾಗಲೀ ಪೊಲೀಸ್ ಇಲಾಖೆ ಮೂಲಕ ರಾಜ್ಯದ ವಿವಿಧ ಮೂಲೆಗಳಲ್ಲಿ ಯಾವ ಯಾವ ವಾತಾವರಣ ನಿರ್ಮಾಣವಾಗುತ್ತಿದೆ, ಆ ವಾತಾವರಣ ನಿರ್ಮಾಣಕ್ಕೆ ಯಾರು ಹೊಣೆಗಾರರು ಆಗಬಹುದು

ಎನ್ನುವ ಚಿಂತನೆ ಮಾಡುತ್ತಾ ಅವರು ದಿನನಿತ್ಯವೂ ಚರ್ಚೆ ಮಾಡುತ್ತಿರುತ್ತಾರೆ. ಹಾಗಿರುವಾಗ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಸುರತ್ಕಲ್‌ನಲ್ಲಿ ಆಗಿರತಕ್ಕಂಥ ಘಟನೆಯ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಯವರು ಇದರ ಸಂಪೂರ್ಣವಾದ ಮಾಹಿತಿಯನ್ನು ಪಡೆದುಕೊಳ್ಳುವುದಕ್ಕೆ ವಿಫಲರಾಗಿದ್ದಾರೆಂದು ಹೇಳಬಯಸುತ್ತೇನೆ. ಈ ಹೇಳಿಕೆಯನ್ನು ನಾನು ಸಂಪೂರ್ಣವಾಗಿ ಆಧಾರಸಹಿತ ಕೊಡುತ್ತಿದ್ದೇನೆ. ನಾನು ಇಲ್ಲಿ ಯಾವುದೇ ಸಂಘಟನೆಗಳನ್ನು ಅಥವಾ ರಾಜಕೀಯ ಪಕ್ಷಗಳನ್ನು ಉದ್ದೇಶಿಸಿ ಮಾತನಾಡುತ್ತಿಲ್ಲ. ಕಳೆದ 30-11-1998ರ ದಿವಸ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಸುರತ್ಕಲ್, ಉಡುಪಿ ಮತ್ತು ಕುಂದಾಪುರ ಜಿಲ್ಲೆಯಾದ್ಯಂತ 4 ಸಂಘಟನೆಗಳು ಕರಪತ್ರಗಳನ್ನು ಮನೆಮನೆಗೆ ಹಂಚಿದ್ದಾರೆ. ಆದು ಯಾವ ಸಂಘಟನೆ, ಅವರು ಏನು ಬರೆದಿದ್ದಾರೆಂದು ಹೇಳಿ ಇಲ್ಲ ಅದನ್ನು ಕೆದಕಲಿಕ್ಕೆ ನಾನು ಹೋಗುವುದಿಲ್ಲ. ಆ ಸಂಘಟನೆಗಳ ಕರಪತ್ರಗಳಲ್ಲಿ ಏನಿವೆ, ಆ ಪತ್ರಗಳಲ್ಲಿ ಏನು ಪ್ರಚೋದನಕಾರಿಯಾದ ಮಾತುಗಳಿಂದ ಮುದ್ರಿತವಾಗಿವೆ, ಅವುಗಳನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ನಾನು ಸ್ಪಷ್ಟವಾಗಿ ನಮ್ಮ ಉಡುಪಿ ಜಿಲ್ಲೆಯ ಪೊಲೀಸ್ ಸೂಪರಿಂಟೆಂಡೆಂಟ್ ಅಧಿಕಾರಿಯವರ ಮುಖಾಂತರ ಕೇಳಿಕೊಂಡಿದ್ದೇನೆ.

ಅಧ್ಯಕ್ಷರು :— ಇದು ಅನಾನಿಮಸ್ ಕರಪತ್ರವೇ?

ಶ್ರೀ ಯು.ಆರ್. ಸಭಾಪತಿ :— ಅಲ್ಲ, ಕರಪತ್ರದಲ್ಲಿ ಹೆಸರು ಸಮೇತ ಇದೆ. ಇದನ್ನು ಓದಬಹುದೆಂದಾದರೆ ಇಲ್ಲಿ ಓದುತ್ತೇನೆ.

ಅಧ್ಯಕ್ಷರು :— ಇದು ಅನಾನಿಮಸ್ಸಾ ಅಥವಾ ಮುದ್ರಣಕಾರರ ಹೆಸರು ಇದೆಯೇ ಎಂದು ಕೇಳಿದೆ. ಅಷ್ಟು ಸಾಕು.

ಶ್ರೀ ಯು.ಆರ್. ಸಭಾಪತಿ :— ಯಾವ ಸಂಘಟನೆ ಇದನ್ನು ಬರೆದಿದ್ದಾರೆ ಎನ್ನುವುದರ ಬಗ್ಗೆ ಬರೆದವರೇ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಧ್ಯಕ್ಷರು :— ಅದನ್ನು ಗೃಹಸಚಿವರಿಗೆ ಕಳುಹಿಸಿಕೊಡಿ.

ಶ್ರೀ ಯು.ಆರ್. ಸಭಾಪತಿ :— ಇದನ್ನು ನಾನು ಬಹಳ ಬೇಸರದಿಂದ ಹೇಳುತ್ತಿದ್ದೇನೆ. ಒಂದು ಸಮಾಜದ ವಿರುದ್ಧ ಇನ್ನೊಂದು ಸಮಾಜವನ್ನು ಎತ್ತಿಕಟ್ಟಲಿಕ್ಕೆ ಎಲ್ಲಾ ರೀತಿಯ ಪ್ರಯತ್ನ ಆ ಕರಪತ್ರದಲ್ಲಿದೆ. ನಾನು ಮುಂಜಾಗರುಕತಾ ಕ್ರಮದಿಂದ ಸೂಪರಿಂಟೆಂಡೆಂಟ್ ಪೊಲೀಸ್ ಅಧಿಕಾರಿಯವರಿಗೆ 30-11-1998 ರಂದು ನಾನು ಕಳುಹಿಸಿದ್ದೇನೆ. ಆದರೆ ಇದು ಕಳೆದ 6 ತಿಂಗಳುಗಳಿಂದ ಸರ್ಕ್ಯುಲೇಷನ್ ಆಗುತ್ತಲೇ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆದರಲ್ಲೂ ಮಂಗಳೂರು ಸುರತ್ಕಲ್ ಏರಿಯಾದಲ್ಲಿ ಇದು ಹೆಚ್ಚು ಸರ್ಕ್ಯುಲೇಷನ್ ಆಗುತ್ತಿದೆ. ಆಮೇಲೆ ಒಂದು ಪ್ರತ್ಯೇಕವಾದ ಪತ್ರಿಕೆ

ಕಳೆದ ಒಂದು ವರ್ಷದಿಂದ ಇಲ್ಲಸಲ್ಲದ ಸುಳ್ಳು ಮಾಹಿತಿಯನ್ನು ನೀಡುತ್ತಲೆ ಇದೆ. "ನೋಡಿ, ಈ ಪತ್ರಿಕೆಯಲ್ಲಿ ಬರೆದಂಥ ವರದಿಯಿಂದಾಗಿ ಮುಂದೊಂದು ದಿನ ಸಮಾಜದಲ್ಲಿ ಕಲಹ ಏಳಬಹುದು" ಎಂದು ಇದರ ಬಗ್ಗೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಿಗೆ ಹಾಗೂ ಉಡುಪಿ ಜಿಲ್ಲಾಧಿಕಾರಿಗಳಿಗೆ ನಾನು ಮಾಹಿತಿ ಕೂಡ ಕೊಟ್ಟಿದ್ದೇನೆ. ಯಾವ ಪತ್ರಿಕೆ ಎಂದು ನಾನು ಇಲ್ಲಿ ಹೇಳುವುದಿಲ್ಲ. ಒಂದು ದಿನ ಪತ್ರಿಕೆ ಒಂದು ವರ್ಷದಿಂದ ಅವಿರತವಾಗಿ ಬೇರೆ ಬೇರೆ ಸಮಾಜದ ವಿರುದ್ಧ ನಿಂದನಾ ಕಾರ್ಯದ ಮಾತುಗಳನ್ನು ಹೇಳುವುದು ಪ್ರಚೋದನಾಕಾರಿ ಹೇಳಿಕೆಗಳನ್ನು ಕೊಡುವುದು, ಘಟನೆಗಳನ್ನು ಉತ್ಪ್ರೇಕ್ಷೆ ಮಾಡಿ ವರದಿ ನೀಡುವುದು ಇದು ಕಂಟಿನ್ಯೂಸ್‌ಆಗಿ ಬಂದಿದೆ.

ಅಧ್ಯಕ್ಷರು :— ಆ ಪತ್ರಿಕೆಯ ಮೇಲೆ ಪ್ರೆಸ್ ಕೌನ್ಸಿಲ್‌ಗೆ ದೂರು ಕೊಟ್ಟಿದ್ದೀರಾ?

ಶ್ರೀ ಯು.ಆರ್. ಸಭಾಪತಿ :— ನಾನು ಪ್ರೆಸ್ ಕೌನ್ಸಿಲ್ ದೂರು ಕೊಟ್ಟಿಲ್ಲ. ಆದರೆ ಜಿಲ್ಲಾಧಿಕಾರಿಗಳು ಇದರ ಬಗ್ಗೆ ಗಮನ ತೆಗೆದುಕೊಳ್ಳಬಹುದೆಂದು ಹೇಳಿ ಅವರಿಗೆ ಮಾತ್ರ ತಿಳಿಸಿದ್ದೇನೆ.

ಅಧ್ಯಕ್ಷರು :— ಸರ್ಕಾರ ಆ ವಿಚಾರದಲ್ಲಿ ಏನು ಮಾಡುವುದಕ್ಕಾಗುತ್ತದೆ? They can answer. But ನೀವೂ ಕೂಡ ಆ ದಿನ ಪತ್ರಿಕೆ ಯಾವುದು ಇದೆ ಅದರ ಮೇಲೆ ಪ್ರೆಸ್ ಕೌನ್ಸಿಲ್‌ಗೆ ದೂರು ಕೊಡಬೇಕಾಗಿತ್ತು. ಆ ಪತ್ರಿಕೆಯನ್ನು ಓದಿ ನಿಮಗೆ ಖಚಿತವಾಗಿ ಆ ತರಹ ಅನ್ನಿಸಿದರೆ, ನಿಮಗೆ ಆ ಸಿದ್ಧಾಂತದಲ್ಲಿ ನಂಬಿಕೆ ಇದ್ದರೆ, ಆ ಪತ್ರಿಕೆಯ ಮೇಲಿನ ಅಧಿಕಾರ ಯಾರಿಗೆ ಬರುತ್ತದೆ, ಯಾರ ವ್ಯಾಪ್ತಿಗೆ ಬರುತ್ತದೆ, ಆ ಪತ್ರಿಕೆಯ ಮೇಲೆ ಕ್ರಮ ಜರುಗಿಸುವುದಕ್ಕೆ ಸಂಬಂಧಿಸಿದವರಿಗೆ ನೀವು ದೂರು ಕೊಡಬೇಕು.

ಶ್ರೀ ಯು.ಆರ್. ಸಭಾಪತಿ :— ನಾನು ಏನು ಆಲೋಚನೆ ಮಾಡಿಕೊಂಡೆ ಎಂದರೆ, ನಮ್ಮ ಆಡಳಿತ ವ್ಯವಸ್ಥೆ ಸುವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿದೆ ಎಂದು ಇವರೆಲ್ಲಾ ಹೇಳುತ್ತಿದ್ದಾರೆ. ನಾನು ಆ ನಂಬಿಕೆಯ ಮೇಲೆ ಜಿಲ್ಲಾಧಿಕಾರಿಗಳಿಗೆ, ಪೊಲೀಸ್ ಅಧಿಕಾರಿಗಳಿಗೆ, ಇವರನ್ನೆಲ್ಲಾ ನಂಬಿಕೊಂಡು ಪತ್ರಿಕೆಯ ಕೆಲವು ಕಾಪಿಗಳನ್ನು ಅವರಿಗೆ ಕೊಟ್ಟಿದ್ದೇನೆ. ಮಂಗಳೂರು ಮತ್ತು ಉಡುಪಿ ಜಿಲ್ಲಾಧಿಕಾರಿಗಳಿಗೆ ವ್ಯಕ್ತಿಗತವಾಗಿ ಕೊಟ್ಟು 'ನೋಡಿ ಸರ್ ಇದರಿಂದಾಗಿ ಒಂದು ಅನಾಹುತ ನಡೆಯುತ್ತದೆ' ಎಂದು ಎಸ್.ಪಿ.ಯವರಿಗೆ ಸಹ ಓರಲ್ ಆಗಿ ಹೇಳಿದ್ದೇನೆ. 30-11-1998 ರಂದು ಆ ನಾಲ್ಕು ಕರಪತ್ರಗಳನ್ನು ಕೊಟ್ಟಿದಕ್ಕೆ ಸ್ವೀಕರಿಸಲಾಗಿದೆ ಎಂದು ನನಗೆ ಒಂದು ನೋಟ್ ಕೊಟ್ಟು ಕಳುಹಿಸಿದರು. ಈ ಗಲಭೆ ನಡೆದ ಕೂಡಲೇ ನೀವು ಇದರ ಬಗ್ಗೆ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ. ಎಂದು ನಾನು ಕೇಳಿದೆ. ಅದಕ್ಕೆ ಅವರು ಏನು ಉತ್ತರ ಕೊಟ್ಟರು ಎಂದರೆ- ರಾಜ್ಯಮಟ್ಟದಲ್ಲಿ ನಾವು ಆ ಕರಪತ್ರಗಳನ್ನು ಕಳುಹಿಸಿದ್ದೇವೆ, ರಾಜ್ಯಮಟ್ಟದಲ್ಲಿ ಇದರ

ಬಗ್ಗೆ ತನಿಖೆ ಮಾಡಲಾಗುವುದು, ನಮಗೆ ರಾಜ್ಯಮಟ್ಟದಿಂದ ಆದೇಶ ಬರದೆ, ಇದರ ಬಗ್ಗೆ ಯಾವುದೇ ಕ್ರಮವನ್ನು ನಾವು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಎಂದು ಹೇಳಿದರು. ಈ ರೀತಿ ಸಂಬಂಧಪಟ್ಟ ಅಧಿಕಾರಿಗಳು ಹೇಳುವುದಾದರೆ ಇದು ಎಂಥ ನ್ಯಾಯ? ನಾನು ಸರ್ಕಾರಕ್ಕೆ ಎಚ್ಚರಿಕೆ ಕೊಡುವುದೇನೆಂದರೆ, ನಿಮ್ಮ ಅಂದರೆ ಸರ್ಕಾರದ ಕೈಯಿಗೆ ಅಸ್ತ್ರ ಜನರು ಕೊಟ್ಟಿದ್ದಾರೆ, ನಿಮ್ಮ ಆಡಳಿತ ವ್ಯವಸ್ಥೆ ಸುವ್ಯವಸ್ಥಿತವಾಗಿದೆ, ಬಡಜನರಿಗೆ ಸಹಾಯ ಮಾಡುತ್ತಿದ್ದೇವೆ, ರಕ್ಷಣೆ ಕೊಡುತ್ತಿದ್ದೇವೆ ಎಂದು ಸರ್ಕಾರ ನಡೆಸತಕ್ಕಂಥವರು ಹೇಳುತ್ತಿದ್ದಾರೆ. ನಾನು ಒಬ್ಬ ಚುನಾಯಿತ ಪ್ರತಿನಿಧಿಯಾಗಿ, ನಾನು ನನ್ನ ಜವಾಬ್ದಾರಿ ಸ್ಥಾನದಲ್ಲಿ ನಿಂತು, ಇಡೀ ಜಿಲ್ಲೆಗೆ ಬೆಂಕಿ ಬೀಳುವ ಸೂಚನೆ ಸಿಗುತ್ತಾ ಇದೆ ಎಂದು ಹೇಳಿ ಪ್ರಚೋದನಕಾರಿಯಾದ ಕರಪತ್ರಗಳನ್ನು ಕೊಟ್ಟರೂ ಕೂಡ, ಆ ಕರಪತ್ರಗಳನ್ನು ಯಾರು ಹೊರಡಿಸಿದ್ದಾರೆ ಎನ್ನುವ ಮಾಹಿತಿ ಮತ್ತು ಹೆಸರಿನ ಸಮೇತ ನಾನು ಓರಲ್ ಆಗಿ ಸಂಬಂಧಪಟ್ಟವರಿಗೆ ತಿಳಿಸಿದ್ದೇನೆ. ಆದರೂ ಕೂಡ ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ಇದ್ದುದರಿಂದಾಗಿ ಈ ಘಟನೆ ನಡೆದಿದೆ ಎನ್ನುವುದು ನನ್ನದೊಂದು ಅನಿಸಿಕೆಯಾಗಿದೆ. ಇದು ನಮ್ಮ ಇಡೀ ಜಿಲ್ಲೆಯ ಒಂದು ಅನಿಸಿಕೆಯೂ ಕೂಡ ಆಗಿದೆ. ಹಂತಹಂತವಾಗಿ ಒಂದು ಜನಾಂಗದ ವಿರುದ್ಧವಾಗಿ ಇನ್ನೊಂದು ಜನಾಂಗವನ್ನು ಎತ್ತಿ ಕಟ್ಟಿ ಆ ಮೇಲೆ ಆತ ರಾಜಕೀಯವಾಗಿ ಮುಂದೆ ಬರಲಿಕ್ಕೆ ಬೇಕಾದಂಥ ದಾರಿಯನ್ನು ರೂಪಿಸಿಕೊಳ್ಳುವಂಥ ಒಂದು ಪ್ರಯತ್ನ ಇಲ್ಲಿ ನಡೆಯುತ್ತಿದೆ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತಿದೆ. ಇದರ ಬಗ್ಗೆ ತನಿಖೆ ಮಾಡಿ, ಇದಕ್ಕೆ ಮೂಲ ಕಾರಣರು ಯಾರು ಎನ್ನುವುದನ್ನು ತನಿಖೆ ಮಾಡಿ, ನಾನು ಯಾವ ಕರಪತ್ರಗಳನ್ನು ಈಗ ಕೊಟ್ಟಿದ್ದೇನೆ ಅದರ ಮೂಲಕ ಇನ್ನು 10-15 ದಿವಸದೊಳಗೆ ನೀವು ಫೈಂಡ್ ಔಟ್ ಮಾಡಿ...

ಶ್ರೀ ಜೆ.ಹೆಚ್. ಪಟೇಲ್:— ಮಾನ್ಯ ಅಧ್ಯಕ್ಷರೆ, ಈ ರೋಗ ಎಲ್ಲಿದೆ, ಅದರ ಮೂಲ ಎಲ್ಲಿದೆ, ಎನ್ನುವುದನ್ನು ತಿಳಿದುಕೊಳ್ಳಬೇಕು ಎನ್ನುವ ಜಿಜ್ಞಾಸೆ ಇವತ್ತು ಎಲ್ಲರಿಗೂ ಇದೆ. ಅದಕ್ಕೋಸ್ಕರ ಕಳೆದ ಸಾರಿ ಮಾನ್ಯ ಪ್ರಧಾನಮಂತ್ರಿಯವರನ್ನು ಕಂಡಾಗ ಇದರ ಬಗ್ಗೆ ರಾಷ್ಟ್ರಮಟ್ಟದ ವಿಚಾರವನ್ನು ನಾವು ಮಾಡಬೇಕಾಗಿದೆ, ಎಲ್ಲಾ ಮುಖ್ಯಮಂತ್ರಿಗಳನ್ನು ಕರೆಯುತ್ತೇನೆ, ತಾವೂ ಕೂಡ ಬರಬೇಕು, ಈ ಸಭೆಯನ್ನು ರಾಷ್ಟ್ರಪತಿಯವರು ಉದ್ಘಾಟನೆ ಮಾಡಬೇಕು ಎಂದು ಹೇಳಿದಾಗ ಅದಕ್ಕೆ ಅವರು ಒಪ್ಪಿದ್ದಾರೆ. ರಾಷ್ಟ್ರಮಟ್ಟದಲ್ಲಿ ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ, ಎಲ್ಲ ಮುಖ್ಯಮಂತ್ರಿಗಳನ್ನೂ ಕರೆಸುತ್ತೇನೆ, ತಾವೂ ಬರಬೇಕು, ರಾಷ್ಟ್ರಪತಿಯವರು ಉದ್ಘಾಟನೆ ಮಾಡಲಿ, ಅದಕ್ಕೆ ಅವರು ಒಪ್ಪಿದ್ದಾರೆಂದರು. ಇದನ್ನು ಯಾವ ರೀತಿ ಬಗೆಹರಿಸುವುದು? ಪೋಲೀಸ್ ವರದಿ ಪ್ರಕಾರ ರೋಗ್ ನೇಷನ್ಸ್ ಕೆಲವರಿದ್ದಾರೆ. They indulge in nammfacturing such weapons and they earn only by such criminal activities. ಅಫಘಾನಿಸ್ಥಾನದಲ್ಲಿದ್ದ ರಷ್ಯಾದವರನ್ನು ಓಡಿಸುವುದಕ್ಕೆ ಅವರು ಶುರು

ಮಾಡಿದ್ದು, ಈಗ ಶ್ರೀ ನವಾಬ್ ಷರೀಫರ ಕಾರಿಗೆ ಬಾಂಬ್ ಇಡುವ ಸ್ಥಿತಿಗೆ ಬಂದಿದೆ. ಇದು ಯಾರೂ ಸುಖವಾಗಿರದ ಪರಿಸ್ಥಿತಿ. ಬಾಂಗ್ಲಾದೇಶ, ಪಾಕಿಸ್ಥಾನ ಇರಬಹುದು. ಹಿಂದೂಸ್ಥಾನದಲ್ಲಿ ರಾಜಸ್ಥಾನದಿಂದ ಹಿಡಿದು ಲಿಂಕ್ಸ್ ಎಲ್ಲಿವರೆಗಿದೆ ಎಂದರೆ, ಬಾಂಬೆ, ಮಂಗಳೂರಿನವರೆಗಿದೆ. Money is the motive or just criminal like that. ಮೊನ್ನೆ ಒಂದು ಕಡೆ ಸ್ಫೋಟವಾಗಿದೆ. ಕೆಲವು ಮೇನಿಯೇಕ್ ಅವರು ಏತಕ್ಕೆ ಕೊಲೆ ಮಾಡುತ್ತಾರೆಂಬುದೇ ಗೊತ್ತಿಲ್ಲ. All of us should sit together and find a way out. ಪೋಲೀಸರು ಒಂದು ಹೆಸರು ಹೇಳಿದ್ದಾರೆ, ಅದು ನನ್ನ ಬಳಿ ಬಂದಿದೆ. ಅದನ್ನು ಗೃಹ ಸಚಿವರು ಖಚಿತಪಡಿಸಿಕೊಳ್ಳದೆ ಸದನದ ಮುಂದಿಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. Can I guess a man to be participant in this crime? I cannot. That is why my appeal to all of you, let us try to find out the basic reason for such devilish, in human activities in the society. ಇದರ ಬಗ್ಗೆ ಯಾರಿಗೂ ಭೂಷಣವೂ ಅಲ್ಲ. ಆ ದೃಷ್ಟಿಯಿಂದ ನೋಡೋಣ. ಎಲ್ಲರೂ ಸೇರಿ ಆಲೋಚಿಸಿ, ಅದಕ್ಕೆ ಪರಿಹಾರ ಕಂಡುಹಿಡಿಯೋಣ. ಪರ್ಟಿಕ್ಯುಲರ್ ಇನ್ಸಿಡೆಂಟ್ ಬಗ್ಗೆ ಅಫಿಷಿಯಲ್ ಆಗಿ ಗೊತ್ತಾಗುವುದಕ್ಕಿಂತ ಮುಂಚೆ I cannot say anything about it.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮಾತಿನ ಪ್ರಕಾರ ನಾವು ಹೋಗುವುದಾದರೆ, ಯಾವುದೇ ಸಂದರ್ಭದಲ್ಲಿ ರೋಗ ಬರದ ರೀತಿಯಲ್ಲಿ ತಡೆಗಟ್ಟುವ ಪ್ರಯತ್ನ ಮಾಡಿದರೆ ಒಳ್ಳೆಯದೇ ಹೊರತು ರೋಗ ಬಂದ ಮೇಲೆ ಅದನ್ನು ನಿವಾರಿಸಲು ಪ್ರಯತ್ನಿಸುವುದು ಸರಿಯಲ್ಲ. ಅದಕ್ಕೆ ನಾನು ಏನು ಹೇಳಿದ್ದೇನೆಂದರೆ, ನಿಮ್ಮಲ್ಲಿಯೇ ಗುಪ್ತಚಾರ ವಿಭಾಗವಿದೆ, ಅದರ ಮೂಲಕ ರಾಜ್ಯದಲ್ಲಿ ಎಲ್ಲೆಲ್ಲಿ, ಯಾವ್ಯಾವ ಸಂಘಟನೆಗಳು, ಈ ತರಹದ ಕೋಮು ಗಲಭೆಗಳನ್ನು ಉಂಟು ಮಾಡುತ್ತಿವೆ, ಹಿಂದೂ, ಮುಸ್ಲಿಮರದಿದ್ದು ಇರಬಹುದು, ಕ್ರಿಸ್ತರದ್ದು ಇರಬಹುದು ಅದನ್ನು ಪತ್ತೆಹಚ್ಚಬೇಕು.

ಅಧ್ಯಕ್ಷರು :— ಅದಕ್ಕೇ ನಾನು ನಿಮ್ಮನ್ನು ಇದು ಅನಾನಿಮಸ್ ಹೌದೇ ಎಂದು ಕೇಳಿದ್ದು. ಇದನ್ನು ಯಾರು, ಯಾವ ಪ್ರೆಸ್‌ನಲ್ಲಿ ಪ್ರಿಂಟ್ ಮಾಡಿದ್ದು?

ಶ್ರೀ ಯು.ಆರ್. ಸಭಾಪತಿ :— ಗೊತ್ತಿಲ್ಲ. ಆ ಸಂಸ್ಥೆಗಳಿಗೆ ಪ್ರಕಾರ ಮಾಡುತ್ತಿವೆ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಸದಸ್ಯರಿಗೆ ಅಂಥ ಕರಪತ್ರಗಳು ಸಿಕ್ಕಿವೆ. ಅದನ್ನು ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದಾರೆ.

MR. SPEAKER: I am not telling it should not be looked into. ನಾನು ಅವರಿಗೆ ಅದನ್ನೇ ಕೇಳಿದ್ದು. ಯಾವುದೋ ಕೆಲವು ಆರ್ಗನೈಜೇಷನ್‌ಗಳ ಹೆಸರುಗಳನ್ನು ಹಾಕಿದ್ದಾರೆ. ಅದಕ್ಕೆ ಪಾಂಪ್ಲೆಟ್‌ಗಳು ಬಂದಿವೆ. The police can definitely investigate and find out where they are printed;

ಶ್ರೀ ಯು.ಆರ್. ಸಭಾಪತಿ :— ಇವರ ಹತ್ತಿರ ಗುಪ್ತಾಚಾರ ವಿಭಾಗವಿದೆ.

ಶ್ರೀ ಕಾಗೋಡು ತಿಮ್ಮಪ್ಪ :— ಅಧ್ಯಕ್ಷರೇ, To that extent he is fair.

ಅಧ್ಯಕ್ಷರು :— ನಾನು ಕೇಳಿದ್ದು does it bear the name of the printer and the publisher? ಅದು ಇಲ್ಲ. ಹೇಡಿಗಳು ಮಾಡುವುದು ಹೀಗೆ. ಯಾರೇ ಮಾಡಿರಲಿ, ತಮ್ಮ ಹೆಸರು ಹೇಳಿಕೊಳ್ಳದೆ, ಯಾವುದೇ ವಿಚಾರವನ್ನು ಚುಣಾವಣೆ ಪ್ರಚಾರ ಮಾಡಲು ಇಷ್ಟಪಡುವವರು ಹೇಡಿಗಳು. ಯಾವುದೇ ಸಿದ್ಧಾಂತ, ವಿಚಾರ ಇರಬಹುದು. ಯಾರು ತಾವು ಮಾಡಿದ್ದನ್ನು, ನಂಬಿದ್ದನ್ನು ಸಮರ್ಥನೆ ಮಾಡಿದ್ದನ್ನು ಧೈರ್ಯವಾಗಿ ಒಪ್ಪಿಕೊಳ್ಳುತ್ತಾರೋ ಅವರಷ್ಟೇ ಸಾಚಾ ಮನುಷ್ಯರು. ನಾವು ಈ ಹೇಡಿಗಳಿಂದ ಏನನ್ನು ತಾನೇ ನಿರೀಕ್ಷಿಸಲು ಸಾಧ್ಯ? The contents are very very explosive. I think your Police authorities can round up these fellows within three days.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಅದರಲ್ಲಿ ವಿಳಾಸವಿಲ್ಲದಿರಬಹುದು. ಬಹಿರಂಗ ಹೇಳಿಕೆ ಕೊಟ್ಟಿದ್ದು, ಲೋಕಸಭೆಯಲ್ಲಿ, ಪತ್ರಿಕಾ ಸಂದರ್ಶನ ಕರೆದು ಹೇಳಿರುವುದನ್ನು ಹೇಳಲಿಲ್ಲವೆಂದು ಹೇಳುವುದು ಸರಿಯಲ್ಲ.

MR. SPEAKER :— That is a different thing. That is not in this issue. Please cooperate.

ಶ್ರೀ ಯು.ಆರ್. ಸಭಾಪತಿ :— ಕರಪತ್ರ ಎಲ್ಲಿ ಪ್ರಿಂಟಾಗಿದೆ ಎಂಬ ಬಗ್ಗೆ ಮಾಹಿತಿ ಇಲ್ಲದಿರಬಹುದು. ಆದರೆ, ನಾನು ಯಾವಾಗ ಕರಪತ್ರವನ್ನು ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿರುವ ಮುಖ್ಯಸ್ಥರಿಗೆ ಕೊಟ್ಟೆನೋ, ಅಂದಿನಿಂದಲೇ ಇವರಿ ತನಿಖೆ ಮಾಡಲು ಪ್ರಯತ್ನಿಸಿದ್ದರೆ, ಈ ಸಮಸ್ಯೆ ಉದ್ಭವಿಸುತ್ತಿರಲಿಲ್ಲ. ರಾಜ್ಯದ ಗುಪ್ತಾಚಾರ ವಿಭಾಗ ಈ ವ್ಯವಸ್ಥೆಯಲ್ಲಿ ಕುಸಿದು ಬಿದ್ದು, ಅವರು ಇದರ ಬಗ್ಗೆ ಗಮನ ಕೊಟ್ಟಿಲ್ಲ. ನಾವು ಎಚ್ಚರಿಕೆಯ ಮಾತು ಕೊಟ್ಟರೂ, ಇಲಾಖೆಯವರು ಗಮನ ಕೊಡದಿದ್ದರಿಂದಾಗಿ, ಇಂಥ ಪ್ರಯತ್ನಗಳು ಮುಂದುವರಿದಿದೆ. ಇವತ್ತು ಗಲಭೆಯಾಗಿ, ಬೆಂಕಿ ಹತ್ತಿ ಕೊಂಡಿದೆ. ಅದನ್ನು ನೋಡಿದಾಗ ಬಹಳ ಶೋಚನೀಯವೆನಿಸುತ್ತದೆ. ಒಂದೊಂದು ಶಾಲೆಗೆ ಹೋಗಿ ಫ್ಯಾನ್‌ಗಳನ್ನು ಬಗ್ಗಿಸಿ, ಕುಡಿಯುವ ನೀರಿನ ನಲ್ಲಿಗಳನ್ನು ಹಾಳು ಮಾಡಿದ್ದಾರೆ. ಆ ಗಲಭೆಯಿಂದ ನೊಂದವರು ಪೋಲೀಸ್ ಸ್ಟೇಷನ್‌ಗೆ ಹೋಗಿ ಕಂಪ್ಲೇಂಟ್ ಕೊಡಲು ಹೋದರೆ, ಅವರು ಅದನ್ನು ರಿಜಿಸ್ಟರ್ ಮಾಡದೆ ವಾಪಸ್ಸು ಕಳುಹಿಸಿದ್ದನ್ನು ಯಾರಾದರೂ ಏನೆಂದು ಕೇಳಿದರೆ, ಅವರ ಮನೆಯಲ್ಲಿ ಕೋಳಿ, ನಾಯಿ ಸತ್ತು, ಕಾಣೆಯಾಗಿದೆಯಂತೆ ಎಂದು ಹೇಳುವ ಯಕಶ್ಚಿತ್ ಭಾವನೆಯ ಮಾತುಗಳನ್ನು ಆ ಅಧಿಕಾರಿಗಳು ಹೇಳಿ, ಘಟನೆಗೆ ತುಪ್ಪ ಸುರಿದಿದ್ದಾರೆ. ನಾನು ಅದರ ಬಗ್ಗೆ ವರದಿ ಕೊಟ್ಟಿದ್ದೇನೆ. ಸುರತ್ಕಲ್‌ನಲ್ಲಿ

ಪೆಣಂಬೂರ್‌ನಲ್ಲಿ, ಬಂದಾರಿನಲ್ಲಿ ಪೋಲೀಸ್ ಸ್ಟೇಷನ್‌ಗಳಿವೆ. ಬಹಳಷ್ಟು ನೊಂದ ಜನರು ಅಲ್ಲಿಗೆ ಹೋಗಿದ್ದಾರೆ. ಆದರಿಂದಾಗಿ, ಇಂಥ ಯಾವುದೇ ಘಟನೆಗಳು ನಡೆಯುವ ಮುನ್ನ ನಿಮ್ಮ ಆಡಳಿತ ವ್ಯವಸ್ಥೆ ಚೆನ್ನಾಗಿದೆ ಎನ್ನುವುದಾದರೆ ಅದರ ಪೂರ್ವಾಪರ ವರದಿಗಳ ಆಧಾರದ ಮೇಲೆ ಯಾರು ಇದಕ್ಕೆ ಹೊಣೆಗಾರರಾಗಬಲ್ಲರೆಂಬುದನ್ನು ಗುರುತಿಸಿ, ಅವರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ, ಇಂಥ ಘಟನೆಗಳು ಇನ್ನೂ ಹೆಚ್ಚಾಗುತ್ತವೆ. ಭಟ್ಕಳದಲ್ಲಿ ನಡೆದಿದ್ದೂ ಅಷ್ಟೆ. ಭಟ್ಕಳದಲ್ಲಿ ನಮ್ಮ ಸಹೋದ್ಯೋಗಿ ಒಬ್ಬರು ಕೊಲೆಯಾಗುತ್ತಾರೆನ್ನುವುದಕ್ಕೆ ಪೂರ್ವ ತಯಾರಿಯನ್ನು ಎಷ್ಟು ತಿಂಗಳಿನಿಂದ ಮಾಡಿದ್ದಾರೆನ್ನುವುದು ಗೊತ್ತಿಲ್ಲ. ಆ ಮಾಹಿತಿಯನ್ನು ಸರ್ಕಾರ ಪಡೆದುಕೊಳ್ಳುವಲ್ಲಿ ವಿಫಲವಾಗಿದೆಯೆಂಬುದು ಸಾಬೀತಾಯಿತು. ಆ ಮಾಹಿತಿಯ ಕೊರತೆಯಿಂದ ನಾವು ಒಬ್ಬ ಶಾಸಕರನ್ನು ಕಳೆದುಕೊಂಡಿದ್ದೇವೆ. ಅವರು ಯಾವ ಪಕ್ಷದವರೇ ಇರಲಿ, ಸರ್ಕಾರ ಇದರಲ್ಲಿ ಸಂಪೂರ್ಣ ವಿಫಲವಾಗಿದೆ ಎಂಬುದನ್ನು ನಾನು ಸೂಚಿಸುತ್ತೇನೆ. ಇನ್ನು ಮುಂದೆ ಸರ್ಕಾರದ ಇದಕ್ಕೆಂದು ಒಂದು ಪ್ರತ್ಯೇಕ ವಿಭಾಗವನ್ನು ರಚಿಸಲಿ. ನಿಮ್ಮಲ್ಲಿ ಇಲಾಖೆಗಳು ಇರಬಹುದು. ಆದರೆ, ಅವರು ನಿಷ್ಕ್ರಿಯರಾಗಿದ್ದಾರೆಂದು ನಾನು ಹೇಳಬಯಸುತ್ತೇನೆ. ರಾಜ್ಯದ ವಿವಿಧ ಮೂಲೆಗಳಲ್ಲಿ ಸೆನ್ಸಿಟೀವ್ ಏರಿಯಾಗಳು ಎಲ್ಲೆಲ್ಲಿವೆ ಎಂಬುದು ತಮಗೆ ಗೊತ್ತಿದೆ. ಅಲ್ಲಿ ಯಾವ್ಯಾವ ತಂಡಗಳೇ ಇರಲಿ, ರಾಜಕೀಯ ಪಕ್ಷಗಳೇ ಇರಲಿ, ಸಂಘಟನೆಗಳೇ ಇರಲಿ, ಅದರ ಲೀಡರ್ ಯಾರು, ಯಾವ ರೀತಿ ವರ್ತಿಸುತ್ತಿದ್ದಾರೆ, ಒಂದು ಸಮಾಜವನ್ನು ಇನ್ನೊಂದು ಸಮಾಜದ ವಿರುದ್ಧ ಎತ್ತಿಕಟ್ಟುತ್ತಿದ್ದಾರೆಯೇ ಎಂಬುದನ್ನು ನೋಡಬೇಕು. ಅಸ್ತ್ರ ನಿಮ್ಮ ಕೈಯಲ್ಲೇ ಇರುವಾಗ ಏತಕ್ಕೆ ತಾವು ಅದನ್ನು ಪ್ರಯೋಗಿಸುವುದಿಲ್ಲ? ಇಂಥ ಘಟನೆ ಇನ್ನೊಂದು ಸಲ ರಾಜ್ಯದ ಯಾವ ಮೂಲೆಯಲ್ಲಿಯೂ ನಡೆಯಬಾರದು. ಈ ಘಟನೆ ಮೂಲಕ ಯಾರಾದರೂ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಹೋಗಬಹುದು. ಅವರ ಚಿಂತನೆ ಶುದ್ಧ ಸುಳ್ಳು. ಈ ರೀತಿಯ ಘಟನೆಗಳ ಮೂಲಕ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತೇವೆಂದು ಯಾರಾದರೂ ಎಣಿಸಿದರೆ, ಅದು ಕನಸು. ರಾಷ್ಟ್ರದ, ರಾಜ್ಯದ ಜನತೆ ವಿವಿಧತೆಯಲ್ಲಿ ಏಕತೆಯನ್ನು ಸಾರಿದ್ದಾರೆ. ಅದನ್ನು ವಿಭಜಿಸುವುದು ಖಂಡಿತ ಸಾಧ್ಯವಿಲ್ಲವೆಂಬ ಮಾತನ್ನು ಸ್ಪಷ್ಟಪಡಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ) :— ಈ ಪ್ರಸ್ತಾವನೆಯ ಇತಿಮಿತಿಗಳ ಅರಿವು ನಮಗಿದೆ. ಏಕೆಂದರೆ, ಸರ್ಕಾರ ಇದರ ಬಗ್ಗೆ ನ್ಯಾಯಾಂಗ ತನಿಖೆಗೆ ಈಗಾಗಲೇ ಆದೇಶ ಹೊರಡಿಸಿದೆ. ಬಹುಶಃ ನಾವು ಏನು ಹೇಳುವುದಿದ್ದರೂ, ನ್ಯಾಯಾಂಗ ವಿಚಾರಣೆಗೆ ಪೂರಕವಾಗಿ, ಸಹಾಯಕವಾಗುವಂತಹ ಕೆಲವು ವಿಚಾರಗಳನ್ನು ಹೇಳಬೇಕು. ತಾವು ಹೇಳುವ ಪ್ರಕಾರ, ಅವರು ಇಲ್ಲಿಯವರೆಗೂ ಟರ್ಮ್ಸ್ ಆಫ್

ರೆಫರೆನ್ಸ್ ಡ್ರಾಫ್ಟ್ ಮಾಡಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಅದನ್ನು ಮಾಡುವಾಗ ನಮ್ಮ ಸೂಚನೆಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತಾ, ನಾನು ಕೆಲವು ಸೂಕ್ಷ್ಮವಾದ ವಿಚಾರಗಳನ್ನು ಹೇಳಬಯಸುತ್ತೇನೆ. ಮುಖ್ಯಮಂತ್ರಿಗಳ ಜೊತೆಯಲ್ಲಿ ಶ್ರೀ ಸಿಂಧ್ಯಾರವರೂ ಸ್ಥಳಕ್ಕೆ ಹೋಗಿದ್ದರೆಂಬುದಾಗಿ ಪತ್ರಿಕೆಯಲ್ಲಿ ಬಂದಿದೆ. ಅವರು, ನೋಡಲು ಸಾಧ್ಯವಿಲ್ಲದಂಥ ಹಲ್ಲೆ ನಡೆಸಿದ್ದಾರೆಂದು ಪ್ರತಿಕ್ರಿಯಿಸಿದ್ದಾರೆ. ಅತ್ಯಂತ ಘೋರ ಹಲ್ಲೆಯಾಗಿದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಆಗ ಗೃಹಸಚಿವರಾಗಿದ್ದ ಶ್ರೀ ರೋಷನ್ ಬೇಗ್‌ರವರು, ಇದು ತೀರಾ ವ್ಯವಸ್ಥಿತವಾದ ಹಲ್ಲೆ ಎಂದು ಹೇಳಿದ್ದಾರೆ. ಆದ್ದರಿಂದ, ಯಾರೋ ಕ್ರಿಮಿನಲ್‌ಗಳು ಸಡನ್ನಾಗಿ ಎಲ್ಲಿಂದಲೋ ಬಂದರು, ಈ ಧಾಳಿ ಮಾಡಿದ್ದರಿಂದಾಗಿ ಅನಾಹುತವಾಯಿತು ಎಂಬುದು ಖಂಡಿತ ಸರಿಯಲ್ಲ. ಇದು ತೀರಾ ವ್ಯವಸ್ಥಿತವಾದ ಹಲ್ಲೆ. ಆದರೆ, ಅದಲ್ಲದೆ, ಇದೊಂದು ಗುಂಪು ಘರ್ಷಣೆ ಎಂದೂ ತೆಗೆದುಕೊಳ್ಳಬೇಕೆಂದು ಹೇಳಬಹುದು. ರಾಜ್ಯದಲ್ಲಿ ಇಂಥ ಒಂದು ವ್ಯವಸ್ಥಿತ ಕಾರ್ಯಕ್ರಮ ಇದಾಗಿದೆ ಎಂಬುದಕ್ಕೆ ಗೃಹಸಚಿವರು ಮಾಹಿತಿಯಿಲ್ಲದೆ ಇದನ್ನು ಹೇಳುವುದಿಲ್ಲ. ಬೇರೆ ಯಾವುದೇ ರೀತಿಯ ಕ್ರಿಮಿನಲ್

2.10 ಪಿ.ಎಂ.

ಉದ್ದೇಶದಿಂದ ದರೋಡೆ ಮಾಡಬೇಕು, ಮರ್ಡರ್ ಮಾಡಬೇಕು, ಅಥವಾ ದ್ವೇಷ ಸಾಧನೆ ಮಾಡಬೇಕು, ಅಥವಾ sudden provocation ಆಯಿತು. ದರೋಡೆ ಮಾಡಬೇಕು ಎಂದು ಖಂಡಿತ ಅಲ್ಲ. ಅಲ್ಲಿ ನಡೆದಿರತಕ್ಕಂಥ ವಿದ್ಯಮಾನಗಳ ಬಗ್ಗೆ ತಾವೇ ಹೇಳಿದಿರಿ ಪುನಃ ನಾನು ಅದನ್ನು ಇಲ್ಲಿ ಹೇಳುವುದಕ್ಕೆ ಅಪೇಕ್ಷೆಪಡುವುದಿಲ್ಲ. ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಯಾರೇ ಹೆಣ್ಣುಮಕ್ಕಳ ಮೇಲೆ ಧಾಳಿ ಮಾಡಿದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು ಎನ್ನುವುದನ್ನು ನಾನೂ ಕೂಡ ಒಪ್ಪುತ್ತೇನೆ. ಅಲ್ಲಿ ಹೆಣ್ಣು ಮಕ್ಕಳ ಮೇಲೆ `brush against the girl' ಏನು ಇದೆ, ನಾವು ಕೂಡ ನೋಡುವುದಕ್ಕೆ ಪ್ರಯತ್ನ ಮಾಡಿದೆವು. ಆದರೆ, ಅಲ್ಲಿ ಹೋದರೆ ಆ ಹೆಣ್ಣು ಇಲ್ಲ, ಇದರ ಬಗ್ಗೆ ಪ್ರಿನ್ಸಿಪಾಲರನ್ನು ಕೇಳಿದರೆ ಅವರೂ ಕೂಡ ಒಪ್ಪುತ್ತಿಲ್ಲ. ಇದೊಂದು ಮುಖವಾಡ ಮಾತ್ರ ಎಂದು ನಮಗೆ ಕಂಡು ಬಂತು. ಇದು ಎಷ್ಟರ ಮಟ್ಟಿಗೆ ಸತ್ಯ ಎನ್ನತಕ್ಕಂಥದ್ದು ನಮಗೆ ಗೊತ್ತಿಲ್ಲ. ಏಕೆಂದರೆ, ಆ ಹೆಣ್ಣು ಕೂಡ ದೂರು ಕೊಡುವುದಕ್ಕೆ ಮುಂದೆ ಬಂದಿಲ್ಲ. ಇದರಲ್ಲಿ ಸತ್ಯಾಂಶ ಏನು ಎಂಬುದನ್ನು ತಮಗೆ ಬಿಟ್ಟಿದ್ದು. ಆದರೆ ಇನ್ನೊಂದು ವಿಚಾರ, ನಮಗೂ ಕೂಡ on the spot ಏಕೆಂದರೆ ಯಾವ ಪತ್ರಿಕೆಗಳಲ್ಲಿ ಕಾಣಿಸಲಿಲ್ಲ. ಮಾನ್ಯ ಸಚಿವರು ಇಲ್ಲಿಯೇ ಇದ್ದಾರೆ. perhaps we cannot find a more secular Minister, most secular Minister like Mr. Mohiddin. This is undisputed.

ಏಕೆಂದರೆ ಇದರಲ್ಲಿ ಪಕ್ಷದ ವಿಚಾರದಲ್ಲಿ ಕಾಣಿಸುವುದಿಲ್ಲ. I have seen his history. Today also I am seeing him functioning as a Minister. ಅಧ್ಯಕ್ಷರೇ, ತಾವು ಇದನ್ನು ಮರೆಯಬಾರದು ಏಕೆಂದರೆ ಇದೂ ಕೂಡ ಬಹಳ ಮುಖ್ಯವಾಗಿರುತ್ತದೆ. ಅಂಥ ಒಬ್ಬ ಸೆಕ್ಯೂಲರ್ ಮಿನಿಸ್ಟರ್ ಅವರನ್ನು ನಿಷ್ಕ್ರೀಯೆ ಮಾಡತಕ್ಕಂಥ ಪ್ರಯತ್ನ, ಇದರ ಪಿತೂರಿ ಅಲ್ಲಿಯೇ ಇರುವುದು. ಅಕ್ರಮ ಸಕ್ರಮ ಯಾರೋ ಮಾಡಿದ್ದಾರೆ, ಅಲ್ಲೊಂದು ಯಕ್ಷಗಾನ ಪ್ರಸಂಗ ನಡೆಯಬೇಕು, ಅದನ್ನು ಮಂತ್ರಿಗಳು ಸಲ್ಲಿಸಿದರು. ಇದೇ ಮುಖ್ಯ ಕಾರಣ. ಅಲ್ಲಿ ಹೆಚ್ಚು ಮಕ್ಕಳು ಮತ್ತೊಂದು ಅಲ್ಲ. ನಮ್ಮಲ್ಲಿ ಹಿಪೊಕ್ರಸಿ ಜಾಸ್ತಿ ಸತ್ಯ ಹೇಳುವುದಕ್ಕೆ ಮನಸ್ಸೇ ಬರುವುದಿಲ್ಲ. ನಾನು ವಿಚಾರಿಸಿದ್ದೇನೆ ಮೂಲ ಕಾರಣವೇ ಇದು. ಒಬ್ಬ ಪ್ರೋಸ್ಟ್ ಸೆಕ್ಯೂಲರ್ ಮಿನಿಸ್ಟರ್‌ರವರನ್ನು ಮ್ಯಾಲಿನ್ ಮಾಡತಕ್ಕಂಥದ್ದು, ಅವರನ್ನು ನಿಷ್ಕ್ರೀಯೆ ಮಾಡತಕ್ಕಂಥ ಒಂದು ಹಿನ್ನೆಲೆ ಇದರಲ್ಲಿ ಬಹಳ ಅಡಗಿದೆ. ಯಾರು ಮಾಡಿದರು, ಯಾವ ಗುಂಪು ಮಾಡಿದರೂ ಎನ್ನುವುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ಆಗಲಿ. But no Minister can function like this. ಇದಕ್ಕೆ ಮೂಲ ಕಾರಣ ಯಾವುದೆಂದು ನನಗೆ ಗೊತ್ತಿದೆ. ಇದಕ್ಕೆ ಒಂದು ಮುಖವಾಡ ಇದೆ. ಅಧ್ಯಕ್ಷರೆ, ಬಹುಶಃ ಇಂದು ಮುಖವಾಡಗಳೇ ಜಾಸ್ತಿಯಾಗಿವೆ. ಸತ್ಯ ಯಾರಿಗೂ ಬೇಡವಾಗಿದೆ, ಪತ್ರಿಕೆಗಳಿಗೆ, ರಾಜಕಾರಣಿಗಳಿಗೆ, ಯಾರಿಗೂ ಬೇಡವಾಗಿದೆ. ಯಾವುದೋ ಒಂದು ನ್ಯಾಯಾಂಗ ವಿಚಾರಣೆ ಆಗಲಿ ಅದನ್ನು ಯಾವ ರೀತಿ ಮುಚ್ಚಿಹಾಕಬೇಕು ಪ್ರಯತ್ನವನ್ನು ನಾವು ಮಾಡುತ್ತೇವೆ ಎನ್ನುವಂತಾಗಿದೆ. ಎಲ್ಲರೂ ಕೂಡ ಇದನ್ನೇ ಮಾಡುತ್ತಿದ್ದಾರೆ. ಈ ರೀತಿ ಮಾಡಿದರೆ ಯಾವ ಸಾಕ್ಷಿ ಮುಂದೆ ಬರುತ್ತಾನೆ?

ಅಧ್ಯಕ್ಷರು :— ಈ ಗಲಭೆ ಪ್ರಾರಂಭದ ದಿನ ನಾನು ಡೆಲ್ಲಿಯಲ್ಲಿದ್ದೆ. ಮೊಯಿದ್ದೀನ್‌ರವರು ನನ್ನ ಜೊತೆಯಲ್ಲಿದ್ದರು. ನಮಗೆ ಅವರನ್ನು ಸಮಾಧಾನ ಮಾಡಿ ಆ ದಿನ ಅಲ್ಲಿಯೇ ಉಳಿಸಿಕೊಂಡು ಮಾರನೇ ದಿನ ಕಳುಹಿಸಿಕೊಡುವುದೇ ಬಹಳ ಕಷ್ಟದ ಕೆಲಸವಾಯಿತು. ಅವರ ಸಮಾಜದವರು ದೋಷಣೆ ಮಾಡುತ್ತಾರೆ, ಏನೆಂದರೆ ನೀನು ಬಹಳ ಮೆದು ಮನುಷ್ಯ, ನಮ್ಮ ಜೀವ, ಆಸ್ತಿ, ಕಾಪಾಡಲಿಲ್ಲ ಎಂದು ಹೇಳುತ್ತಾರೆ. ಇತರರು ಇವರನ್ನು ಜಾತೀವಾದಿ ಎಂದು ಕರೆಯುತ್ತಾರೆ. ಸಾರ್ವಜನಿಕರ ಬದುಕಿನಲ್ಲಿ ಅಂತಹವರು ಇರುವುದಕ್ಕೆ ಸಾಧ್ಯವಾಗಿಲ್ಲವೆಂದರೆ, ಈ ದೇಶದಲ್ಲಿ ಇನ್ನೆಂಥವರು ಇರಬೇಕು?

ಶ್ರೀ ಎಂ. ವೀರಪ್ಪ ಮೊಯಿಲಿ :— ಈ ರೀತಿ ಆದರೆ ಯಾರು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ನಿಷ್ಪಕ್ಷಪಾತವಾಗಿ, ಸೆಕ್ಯೂಲರ್‌ಆಗಿ, ಯಾರು ಮಾಡುವುದಕ್ಕೆ ಆಗುವುದಿಲ್ಲ. ಇದರಲ್ಲಿ ಮತ್ತೊಂದು ಮುಖವಿದೆ. ಈಗ ಯಾರೋ ಒಬ್ಬ ನಾನ್ ಬೇಲ್‌ಬಲ್ ಕೇಸ್ ಹಾಕಿದ್ದಾರೆ. ಯಾರ ಮೇಲಾದರೂ ಕೇಸ್ ಹಾಕುತ್ತಾರೆ. ಈ ರೀತಿ

ಹಾಕಿರತಕ್ಕಂಥ ಕೇಸನ್ನು ರಾಜಕಾರಣಿಗಳು, ಅಥವಾ ನಾವೊಂದು ಪಂಗಡದವರು ನಾನ್ ಬೇಲ್‌ಬಲ್ ಕೇಸನ್ನು ಬೇಲ್‌ಬಲ್ ಕೇಸ್ ಮಾಡಬೇಕು ಎಂದು ಪಬ್ಲಿಕ್ ಮೀಟಿಂಗ್ ಮಾಡುವುದು, ರ್‍ಯಾಲಿ ಮಾಡುವುದು, ಇದಕ್ಕೆ ಪೋಲಿಸ್‌ನವರು ನಾವು ಮಾಡತಕ್ಕಂಥ ಒತ್ತಾಯಕ್ಕೆ ಮಣಿದು, ಶರಣಾಗತರಾಗಿ ಅದನ್ನು ಬೇಲ್‌ಬಲ್ ಮಾಡುವುದು. ಈ ರೀತಿ ಮಾಡಿದರೆ ಏನು ಅರ್ಥ ಇದೆ? Is it not a gross interference by the politicans or any group on the police and the police acting on it, ಪೋಲಿಸ್‌ನವರ ಈ ದಾಕ್ಷಿಣ್ಯದಿಂದ, ಇದಕ್ಕೆ ಮೂಲ ಕಾರಣ ಇದೇ, ನಾನ್ ಬೇಲಬಲ್ ಇದ್ದದ್ದನ್ನು ಬೇಲ್‌ಬಲ್ ಮಾಡುವುದೇ ಇದಕ್ಕೆ ಮೂಲಕಾರಣ. ಬೇಲ್‌ಬಲ್ ಮಾಡುವ ಹಾಗಿದ್ದರೆ ಅದನ್ನು ಕೋರ್ಟ್‌ನಲ್ಲಿ ಮಾಡಿ. ಕೋರ್ಟಿನಲ್ಲಿ ಆದರೆ ಲಾಯರ್ ಇರುತ್ತಾರೆ, ಜಡ್ಜ್ ಇರುತ್ತಾರೆ ಅಲ್ಲಿ ನೀವು ಇದನ್ನು ನಾನ್ ಬೇಲ್‌ಬಲ್ ಅಲ್ಲಿ ಬೇಲ್‌ಬಲ್ ಎಂದು ವಾದ ಮಾಡಿ. Police responding to the big rally. ದಯಮಾಡಿ

(interruptions)

SMT. PRAMILA NESARGI: Even for non-bailable, bail is available?

ಶ್ರೀಎಂ. ವೀರಪ್ಪ ಮೊಯಿಲಿ :— ಹಾಗಾದರೆ ಇನ್ನು ಮುಂದೆ ಮರ್ಡರ್ ಮಾಡಿದರೆ ನಾವು ರ್‍ಯಾಲಿ ಮಾಡುತ್ತೇವೆ, ನೀವು ಪೋಲೀಸ್‌ನವರು ಬಿಡುತ್ತೀರೋ I think you must strip off the uniform from that the police, who acts like this, on a gross indulgence ನಾವು ಇಲ್ಲಿ ಮಾಡಿಫಿಕೇಷನ್‌ಗೆ ಒತ್ತಡ ಮಾಡುತ್ತೇವೆ, ಇವರು ಹಿಂದೆ ತೆಗೆದುಕೊಳ್ಳುತ್ತಾರಾ? Will they release them? Will they take away the case. ಅಧ್ಯಕ್ಷರೇ, ಇದನ್ನು ಅಷ್ಟು ಹಗುರವಾಗಿ ತೆಗೆದುಕೊಳ್ಳತಕ್ಕಂಥ ವಿಚಾರವಲ್ಲ. It has to be decided today. Judicial Commission report will come after one or two years. ಹಾಗಾದರೆ ಇಂಥ ರ್‍ಯಾಲಿಗಳು ಎಲ್ಲಾ ಕಡೆ ನಡೆಯಲಿ, Alright, I will give a message. ಇಂಥ ರ್‍ಯಾಲಿಗಳನ್ನು ಮಾಡಲಿ, ನೀವು ವಿತ್‌ಡ್ರಾ ಮಾಡಿ, ನಾನ್ ಬೇಲ್‌ಬಲ್‌ಅನ್ನು ಬೇಲ್‌ಬಲ್ ಮಾಡಿ, murder ಅನ್ನು simple injury ಮಾಡಿ. Are you going to do that? This is what you have done in suratkal. ಇದರಲ್ಲಿ ನಿಮ್ಮ ಅಡ್ಮಿನ್ಸ್ಟ್ರೇಷನ್ ತಪ್ಪಿದೆ, ಸಾರ್ವಜನಿಕರ ಜೀವನದಲ್ಲಿರತಕ್ಕಂಥ ನಮ್ಮದೂ ತಪ್ಪು ಇದೆ This is what has been done. ಇದನ್ನು ದಯಮಾಡಿ ವಿಚಾರ ಮಾಡಬೇಕು. ಏಕೆಂದರೆ ಕೆಲವು ವಿಚಾರಗಳನ್ನು ಹೇಳಬಾರದು, This is a report of Times of India.

ಸಂಸ್ಥೆಗಳ ಹೆಸರು ಇಲ್ಲಿ ಇದೆ, ಯಾರು ತಪ್ಪು ಮಾಡಿದ್ದಾರೆಂದು ಇದೆ, ಎಲ್ಲಾ ಇದೆ, ನಾನು ಇದನ್ನು ತಮ್ಮ ಗಮನಕ್ಕೆ ಕಳುಹಿಸಿಕೊಡುತ್ತೇನೆ. I will not mention. because on my account let the judicial report should not be interfered. I dont want to.. ತಾವು ಇದನ್ನು ಸರ್ಕಾರಕ್ಕೆ ದಯಮಾಡಿ ತಿಳಿಸಬೇಕು. But it is a very important paper like Times of India, they are reporting. ಅಧ್ಯಕ್ಷರೆ, 8ನೇ ತಾರೀಖಿಗೆ ಇದು ಯಾವುದೋ ಘಟನೆ ನಡೆಯುತ್ತಿದೆ, molestation or whatever it may be. ಅದರ ಮೇಲೆ ರಿಮಾರ್ಕ್ಸ್ ಬಂತು, 8ನೇ ತಾರೀಖಿನಿಂದ 28ನೇ ತಾರೀಖಿನವರೆಗೆ it was brewing ಇದು ಒಂದು ಪ್ರಯತ್ನ ಆಗಬೇಕು, ನಮ್ಮ ಜಿಲ್ಲೆಯಲ್ಲಿ ಯಾರ್ಯಾರು ಇದ್ದಾರೆ, ಏನೇನು ನಡೆಯುತ್ತಿದೆ, ಇದು ಎಲ್ಲದರ ಬಗ್ಗೆ ತಮಗೆ ಇಂಟಲೆಜೆನ್ಸಿ ರಿಪೋರ್ಟ್ ಇದೆ.

ಅಧ್ಯಕ್ಷರು :— ಸಿಂಧ್ಯಾರವರೇ, ಮಾನ್ಯ ಮೊಯ್ಲಿಯವರು ಯಾವ ರೆಫರೆನ್ಸ್ ಈಗ ಮಾಡಿದ್ದಾರೆ that owing to the pressure, on a account of the rallies or the demonstrations that were held, if the section have been changed, if that allegations are true, you will have to come forward in your realy...

SRI M. VEERAPPA MOILY: You have to suspend that officers?

MR. SPEAKER : You have to reply about the facts as well as the actions that you would be taking at the time of reply.. because there cannot be any kind of compromise on these kinds. We have to run a civilised society. ಆದ್ದರಿಂದ, ನಾನು ಮೊದಲೇ ತಮಗೆ ಸೂಚನೆ ಕೊಡುತ್ತಿದ್ದೇನೆ, ತಾವು ತಮ್ಮ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ, ಉತ್ತರ ಕೊಡುವ ವೇಳೆಗೆ ಅದರ ಸತ್ಯಾಸತ್ಯತೆಯ ಬಗ್ಗೆ ಹೇಳತಕ್ಕದ್ದು, ಅದರಲ್ಲಿ ಏನಾದರೂ ಸತ್ಯಾಂಶ ಇದ್ದರೆ ಆ ಅಧಿಕಾರಿಗಳು ಯಾರಿದ್ದಾರೆ ಅವರ ಮೇಲೆ ಈಗಲೇ ಕ್ರಮ ತೆಗೆದುಕೊಳ್ಳತಕ್ಕದ್ದನ್ನು ತಾವು ಈಗಲೇ ಸ್ಪಷ್ಟಪಡಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ :— ಅವರು ಇದನ್ನೆಲ್ಲಾ ಪರಿಶೀಲಿಸಿ ನಾಳೆ ಬೇಕಾದರೆ ಉತ್ತರ ಕೊಡಲಿ. I demand that. Not even a single officer has been suspended or action taken for having yielded to that.. Where is the rule of law in Karnataka?

MR. SPEAKER: My concern as presiding officer is very simple. ಒಂದು ಜಾಗದಲ್ಲಿ ಒಂದು ಘಟನೆ ನಡೆದಾಗ ಅದು ಕಾನೂನಿಗೆ ವಿರುದ್ಧ ಎಂದು ಆದಾಗ, ಕೆಲವರು ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಸ್ವೇಚಾನುಚಾರವಾಗಿ ನಡೆದುಕೊಂಡಿದ್ದಾರೆಂದು, ಹೇಳಿ ಕಾನೂನು ಪ್ರಕಾರ ಕ್ರಮ ಜರುಗಿಸಿ ಅವರನ್ನು ವಶಕ್ಕೆ ತೆಗೆದುಕೊಂಡಾಗ ಹೊರಗಡೆಯಾಗತಕ್ಕಂಥ for demonstrations and ralliesಗೆ ಹೆದರಿ, ಕಾನೂನು demonstrationsಗೆ, ರ್‍ಯಾಲಿಗೆ ಬಗ್ಗುವುದಾದರೆ, ನಾವು ಅದನ್ನು ಸಹಿಸುವುದಕ್ಕಾಗುವುದಿಲ್ಲ. ಅಷ್ಟಕ್ಕೆ ಮಾತ್ರ ನಾನು ಸೀಮಿತವಾಗಿದ್ದೇನೆ. ಉಳಿದ ಯಾವುದೂ ನನಗೆ ಸಂಬಂಧವಿಲ್ಲ. ತಾವು ಹೇಳಿ he will reply.

ಶ್ರೀ ಬಿ.ಎಸ್. ಯಡಿಯೂರಪ್ಪ :— ರೆಕಾರ್ಡ್ಸ್ ಸರಿಯಾಗಿರಬೇಕು. ಯಾವ ದಿವಸ ಈ ಘಟನೆ ನಡೆಯಿತು, ಆ ಹೆಣ್ಣು ಮಗಳ ಮೇಲೆ ಮೊಲೆಸ್ಟ್ ಮಾಡಿ ಘಟನೆ ನಡೆಯಿತು, ಒಬ್ಬ ಯುವಕನ ಸಾವು ಆಯಿತು, ಅಲ್ಲಿ ರಕ್ಷಣೆ ಇಲ್ಲ, ಹೋಗುವುದಕ್ಕೆ ಅವಕಾಶ ಮಾಡಬೇಕು, ಬಂದೋಬಸ್ತ್ ಮಾಡಬೇಕು ಎಂದು. ಕೆಲವರು ಪ್ರತಿಭಟನೆ ಮಾಡಿದರು. ದಯಮಾಡಿ ಮಾನ್ಯ ಮೊಯ್ಲಿಯವರು ಆ ಡೇಟ್ ಹೇಳಬೇಕು. ನಾನು ಈ ಮಾತನ್ನು ಏಕೆ ಹೇಳುತ್ತೇನೆಂದರೆ, ಮಾನ್ಯ ಗೃಹ ಸಚಿವರ ಹಾಗೂ ಸರ್ಕಾರದ ಗಮನಕ್ಕೆ ಬರಲಿ ಎಂದು ಹೇಳುತ್ತಿದ್ದೇನೆ, ರೇಕಾರ್ಡ್ಸ್ ಸರಿಯಾಗಿ ಇರಬೇಕು. ಏಕೆಂದರೆ, ಯಾವ ದಿವಸ ಘಟನೆ ನಡೆಯಿತು, ಘಟನೆ ನಡೆದಂಥ ಪರಿಣಾಮ ಹಾಗೂ ಅಲ್ಲಿ ರಕ್ಷಣೆ ಸಿಗುತ್ತಿಲ್ಲ...

ಅಧ್ಯಕ್ಷರು :— ವಿಷಯ ವಿಷಯಾಂತರ ಆಗುವುದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ :— ನಾನು ಹೇಳುವಂಥದ್ದು ಆ ಘಟನೆ ನಡೆದ ಹಿಂದಿನ ದಿನದ ಸಂದರ್ಭದಲ್ಲಿ ಬಂಧನ ಮಾಡಿದರು, ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ. ಅಧ್ಯಕ್ಷರೆ, ಅಲ್ಲಿ ನನಗೆ ಸಿಕ್ಕಿ ಮಾಹಿತಿ ಪ್ರಕಾರ ನಾನು ಹೇಳಿದ್ದೇನೆ. ಮಾನ್ಯ ಮೊಯಿಲಿಯವರು ಹೇಳುವುದರ ಬಗ್ಗೆ ನನ್ನ ಅಭ್ಯಂತರ ಏನೂ ಇಲ್ಲ.

ಅಧ್ಯಕ್ಷರು :— ನಾನು ಅದಕ್ಕಾಗಿ ಹೇಳಿದ್ದೇನೆ. bailable offenceಅನ್ನು ತೋರಿಸಿ ಸೆಕ್ಷನ್ಸ್‌ಅನ್ನು ಇಂಪ್ಲೀಡ್ ಮಾಡಿ ಕೆಲವರನ್ನು ಕಷ್ಟಡಿಗೆ ತೆಗೆದುಕೊಂಡು, ಮಾನ್ಯ ಮೊಯ್ಲಿಯವರು ಹೇಳಿದಂತೆ ಸ್ಟೇಷನ್ ಮುಂದೆಯೋ ಅಥವಾ ಅಲ್ಲೆಲ್ಲೋ ನಡೆಯತಕ್ಕಂಥ demonstrations ರ್‍ಯಾಲಿಗೆ ಪೊಲೀಸ್ ಅಧಿಕಾರಿಗಳು ಹೆದರಿ ಅಥವಾ ಒತ್ತಡಕ್ಕೆ ಬಗ್ಗಿ ಸೆಕ್ಷನ್‌ನ್ನು ಬದಲಾವಣೆ ಮಾಡಿದರೆ that cannot be permitted. ಆ ವಿಚಾರದಲ್ಲಿ ಕ್ಲಾರಿಫಿಕೇಷನ್ ಕೊಡಿ ಎಂದು ನಾನು ಸೂಚನೆಯನ್ನು ಕೊಟ್ಟಿದ್ದೇನೆ. I will confine to that. I will not go beyond that.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಅದೇ ಅಧಿಕಾರಿಗಳು ಇನ್ಯಾವುದೋ ಒತ್ತಡದ ಕಾರಣದಿಂದ ಬೈಲಬಲ್ ಅಥವಾ ನಾನ ಬೈಲಬಲ್ ಅಫೆನ್ಸ್ ಅನ್ನು ಹಾಕಿ ಎಂದೂ ಹೇಳಬಾರದು. ಅವರು ಚೇಂಜೂ ಮಾಡಬಾರದು. ಆ ತನಿಖೆಯೂ ಆಗಲಿ.

ಶ್ರೀ ಯು.ಆರ್. ಸಭಾಪತಿ :— ಇವರು ಪೊಲೀಸ್‌ನವರ ಮೈಕನ್ನು ಹಿಡಿದುಕೊಂಡು ಭಾಷಣ ಮಾಡಿದ್ದಾರೆ. ಅದನ್ನು ಹೇಳಲಿ,

ಶ್ರೀ ಬಿ.ಎಸ್. ಯಡಿಯೂರಪ್ಪ :— ಆ ವಿದ್ಯಾರ್ಥಿನಿಲಯವನ್ನು ಯಾವ ರೀತಿ ಕಾಲೇಜಿನಿಂದ ಹಿಡಿದುಕೊಂಡು...

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅವರಿಗೆ ಯಾಕೆ ಸರ್? ಪ್ರೊಸೆಷನ್‌ನಲ್ಲಿ ಅವರಿದ್ದರಾ?

ಶ್ರೀ ಎಂ. ವೀರಪ್ಪ ಮೊಯಿಲಿ :— ಇದು ಬಹಳ ಜವಾಬ್ದಾರಿಯುತವಾದ ಪ್ರಜಾವಾಣಿ ಪತ್ರಿಕೆಯಿಂದ ಇನ್ನೊಂದು ವರದಿ, ಅದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಿಂದ ಇದು ಸ್ಪಷ್ಟವಾದ ಸಂಕೇತ. ದಿನಾಂಕ: 12-1-1999ರ ಸುರತ್ಕಲ್‌ನಲ್ಲಿ ಡಿಸೆಂಬರ್ 8ರಂದು ಹುಡಿಗೆಯೊಬ್ಬಳನ್ನು ಚುಡಾಯಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ಕು ಜನರ ಬಂಧನವನ್ನು ವಿರೋಧಿಸಿ ರಾಜಕಾರಣಿಗಳ ನೇತೃತ್ವದಲ್ಲಿ ಕೆಲವು ಸಂಘಟನೆಗಳು 5 ಗಂಟೆಗಳ ಕಾಲ ಹೆದ್ದಾರಿ ತಡೆ ನಡೆಸಿದ್ದು ಹಾಗೂ ಬಂಧನದಿಂದ ಬಿಡುಗಡೆಯಾದವರನ್ನು ಮೆರವಣಿಗೆ ಮಾಡಿದ್ದು ಸಮಾಜದ ಇನ್ನೊಂದು ಪಾಳೆಯಕ್ಕೆ ಸ್ಪಷ್ಟ ಸಂಕೇತವನ್ನು ಕಳುಹಿಸಿತು. I will just pass over to you. It supports that. ಅದು ಟೈಮ್ಸ್ ಆಫ್ ಇಂಡಿಯಾ ಆಯಿತು. ಇದು ಪ್ರಜಾವಾಣಿ I don't think these papers deal with reckless rumours. They are most credible papers. ಸನ್ಮಾನ್ಯ ಅಧ್ಯಕ್ಷರೆ, ನಾನು ಇನ್ನೊಂದನ್ನು ಸ್ಪಷ್ಟವಾಗಿ ಹೇಳುತ್ತೇನೆ. 28ನೇ ತಾರೀಖಿಗೆ ಈ ಘಟನೆ ಪ್ರಾರಂಭವಾಯಿತು. 29 ಹಾಗೂ 30ನೇ ತಾರೀಖು ಗಲಾಟೆಯಾಯಿತು. ಶಿವಮೊಗ್ಗದಲ್ಲಿ ನಮ್ಮ ಸರ್ಕಾರ ಇರುವಾಗ, ಶಿವಮೊಗ್ಗದ ಆ ಭಾಗದ ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಈ ಭಾಗದಲ್ಲಿ ಗಲಾಟೆ ಆದರೆ ಪೊಲೀಸ್ ಫೋರ್ಸ್ ಇರಬೇಕೆಂದು ಹೇಳಿ we had established a big forces there. Infact on 28th if they had requisitioned, within 4-5 hours, police could have arrived. ಎಸ್.ಪಿ.ಯವರು requisition ಮಾಡಿಲ್ಲವೋ ಯಾರು ಮಾಡಿಲ್ಲವೋ, that is a total failure. Police arrived only on 1st, according to our report. ಸಚಿವರು ಬರುವುದಕ್ಕೂ ಪೊಲೀಸ್ ಫೋರ್ಸ್ reinforcement ಶಿವಮೊಗ್ಗಕ್ಕೆ ಬರುವುದೂ ಸರಿಹೋಯಿತು. Is it to protect the Minsiter or to control the law and order. ಶಿವಮೊಗ್ಗದಿಂದ ಪೊಲೀಸ್‌ರವರನ್ನು ಕರೆಸಿತು.

ತಾವು ದಯಮಾಡಿ ಈ ವಿಚಾರವನ್ನು ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. There is a total lapse on the part of the police. I do not think the local police have properly reported to the headquarters. It is only after the headquarters, DGF. really did excellent arrangements. That means, the very fact that the D.G.P. deployed many important and most senior officers at various crucial and critical points in Suratkal and Mangalore, things started taking control. That means, there was total lack of police leadership, las and order leadership in the District from 28th to 30th. There was total anarchy. Nobody controlled it. ಇವತ್ತು ನಾನು ಬಹಳ ಜವಾಬ್ದಾರಿಯಿಂದ ಇದನ್ನು ಹೇಳುತ್ತಿದ್ದೇನೆ. It is only after head quarters, ಪರಿಸ್ಥಿತಿಗೆ ಪೊಲೀಸರು ಸ್ಪಂಧಿಸುವುದು ಅವರ ಕರ್ತವ್ಯವಲ್ಲವೇ? ಬರೀ ಫೈಲ್‌ನಲ್ಲಿ ಸ್ಪಂಧಿಸುತ್ತಾರಾ? on the spot they should have responded. ಯಾವಾಗಲೂ ಕೂಡ ನನಗೆ ನೆನಪಿರುವ ಹಾಗೆ ನಮ್ಮ ಜಿಲ್ಲೆಯ ಇತಿಹಾಸದಲ್ಲಿ, ರಾಷ್ಟ್ರೀಯ ಹೆದ್ದಾರಿಯಲ್ಲಿ 4-5 ದಿವಸ ರೋಡ್ ಬ್ಲಾಕ್ ಆದ ಇತಿಹಾಸ ಇಲ್ಲ. ಇದು ನಡೆದಿದೆ. In the national Highways, continuously for 4-5 days, blocked, in the history of our District. Where was the law and order question? That is why they get encouraged. They said ಕಣ್ಣಿಗೆ ಕಾಣುವುದು Motor bike, Sumo, ಈ ನಂಬರ್‌ಗಳನ್ನು ಪೊಲೀಸರಿಗೆ ಪಾಸ್ ಮಾಡುತ್ತಿದ್ದಾರೆ. not even a single vehicle was seized, but subsequently they were seized. ಆಮೇಲೆ ಮಾಡಿರಬಹುದು. Sumo, and Bicycle number was given. ಬೈಸಿಕಲ್ ನಂಬರು ಹಾಗೂ ಟಾಟಾ ಸುಮೋ ನಂಬರು ಕೊಟ್ಟರೂ ನಿರಾತಂಕವಾಗಿ it became punjab for a week. I tell you in the District. Is it that difficult to control? ಅಧ್ಯಕ್ಷರೆ, ನಮ್ಮ ಜಿಲ್ಲೆಯ ಇತಿಹಾಸದಲ್ಲಿ 7,250 ಜನ ಪೊಲೀಸರು. ಡಿಪ್ಲಾಯ್ ಮಾಡಿದಂಥ ಇತಿಹಾಸ ಇಲ್ಲ. so much of police were deployed thereafter. Is it not serious? Of course, it may not be serious. That is why our leader rushed from Delhi. It is an unpredededented thing. 7250 ಜನ ಪೊಲೀಸರು ಡಿಪ್ಲಾಯ್ ಆಗಬೇಕಾದದ್ದು, I am not talking about the Government. ಬಾಕಿಯವರಿಗೆ ಇದು ಬಹಳ ಅದ್ಭುತ ಪ್ರಶ್ನೆ ಆಗಿರಲಿಕ್ಕಿಲ್ಲ. So much of police being deployed may not be serious matter for the others. But for our party yes. ನಂತರ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿದ್ದರು. That is different matter.

ಅಧ್ಯಕ್ಷರೆ, ನಾನು ಇದನ್ನು ಹೆಚ್ಚಿಗೆ ವಿಸ್ತರಿಸಲಿಕ್ಕೆ ಹೋಗುವುದಿಲ್ಲ. Because I thought this is very important. ಏಕೆಂದರೆ ಮುಂದೆ ಜುಡಿಷಿಯಲ್ ಕಮೀಷನ್ ಬಂದ ಮೇಲೆ ಇದರ ಬಗ್ಗೆ ಆಕ್ಷನ್ ತೆಗೆದುಕೊಳ್ಳುವುದು ಬೇಡ. ಈಗಲೇ ತೆಗೆದುಕೊಳ್ಳಬೇಕು. This may be repeated somewhere else. ಮತ್ತು ವ್ಯವಸ್ಥಿತವಾಗಿ ಯಾವುದು, ಈ ಪ್ರಚೋದನೆ ಹಾಗೂ ಈ ಘಟನೆಗಳನ್ನು ನಿರ್ಮಾಣ ಮಾಡತಕ್ಕಂಥ ನಿರ್ಮಾತೃಗಳು ಯಾರಿದ್ದಾರೆ. They are not mere. criminals, they are something more than that.ಅದನ್ನು ತಾವು ಗುರುತಿಸಬೇಕಾಗುತ್ತದೆ. ಅಂತಹ ಶಕ್ತಿಗಳನ್ನು ಹಾಗೂ ಗುಂಪುಗಳನ್ನು ತಾವು ಗುರುತಿಸಬೇಕಾಗುತ್ತದೆ. ಇದಕ್ಕೆ ಯಾರ ಹಿನ್ನೆಲೆ ಇದೆ? ಕೆಲವು ಅಮಾಯಕರನ್ನು ಇಲ್ಲಿ ಡಿಪ್ಲಾಯ್ ಮಾಡುತ್ತಾರೆ. ಅವರನ್ನು ಮಾತ್ರ ಹಿಡಿದರೆ ಇಲ್ಲಿ ಸಾಕಾಗುವುದಿಲ್ಲ. ಇಲ್ಲಿ ಅಮಾಯಕರು ಸಿಗದಿದ್ದರೆ ಇನ್ನೊಂದು ಕಡೆ ಬೇರೆ ಅಮಾಯಕರನ್ನು ಹಿಡಿಯುತ್ತಾರೆ. Those forces are provoking the innocent persons, by ideological intoxication. ಅದರ ಹಿಂದುಗಡೆ ಯಾವ ಒಂದು ಫೋರ್ಸ್‌ಸ್ ಇದೆ ಅದನ್ನು ಹಿಡಿಯತಕ್ಕಂಥ ಕೆಲಸವನ್ನು ಇದುವರೆಗೆ ಮಾಡಿಲ್ಲ. You have not done it at all. That means, ನೀವು ಇದರಲ್ಲಿ ಒಂದು ರೀತಿಯcompromise ಮಾಡುವ ಪ್ರವೃತ್ತಿ ಸರ್ಕಾರ ಮಾಡಿದ್ದರೆ this can crop up anywhere else. ಆದ್ದರಿಂದ ನಾನು ಇಷ್ಟು ಮಾತ್ರ ಕೆಲಸ ವಿಚಾರಗಳನ್ನು ಹೇಳಿದ್ದೇನೆ. ಅವರು ನಾಳೆಯೇ ಇದರ ಬಗ್ಗೆ ವರದಿಯನ್ನು ಕೊಡಲಿ. ಇದರ ಬಗ್ಗೆ ಸ್ಪಷ್ಟವಾದಂಥ ಉತ್ತರವನ್ನು ಕೊಡಬೇಕೆಂದು ನಾನು ತಮ್ಮ ಮುಖಾಂತರ ಕೇಳುಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ, ಇದರಲ್ಲಿ ಸರ್ಕಾರ ಮುಚ್ಚಿಟ್ಟುಕೊಳ್ಳುವಂಥದ್ದು ಏನೂ ಇಲ್ಲ. ನಾನು ರಿಪ್ಲೈ ಕೊಡುವ ಮುಂದೆ ಏನು ಹೇಳಬೇಕೆಂದು ಅನ್ನುತ್ತಿದ್ದೇನೆಂದರೆ, ಅವರು ಮಾತನಾಡಲಿ ನನ್ನ ತಕರಾರು ಏನೂ ಇಲ್ಲ. ಸದಾನಂದಗೌಡರೇ ತಾವು ಆಮೇಲೆ ಮಾತನಾಡಿ. ನಾನು ಉತ್ತರವನ್ನು ಕೊಡುತ್ತಿಲ್ಲ. ನಾನು ತಾಳ್ಮೆಯಿಂದ ಕೇಳುತ್ತಿದ್ದೇನೆ. ಮಾನ್ಯ ವೀರಪ್ಪ ಮೊಯ್ಲಿಯವರು ಹಾಗೂ ಜುಡಿಷಿಯಲ್ ಮಾಡತಕ್ಕಂಥ ಅವರ ಶಿಫಾರಸ್ಸಿನ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಅದು ಒಂದು ಕ್ರಮ. ಆಗ ನಾನು ಗೃಹ ಸಚಿವನಾಗಿರಲಿಲ್ಲ. ಆದರೂ ನಾನು ಹೋಗಿದ್ದೆ, ಮುಖ್ಯಮಂತ್ರಿಗಳು ಹೋಗಿದ್ದರು ಹಾಗೂ ಮೊಯಿದ್ದೀನ್‌ರವರು ಹಾಗೂ ನಾಣಯ್ಯನವರು ಹಾಗೂ ಡಿ.ಜಿ.ಪಿ.ಯವರು ಹೋಗಿದ್ದೆವು. ನಾನು ಅಲ್ಲಿದ್ದಾಗ ಕೆಲವು ಕ್ರಮಗಳನ್ನು ಗಮನಿಸಿದ್ದೇನೆ. ನಾನು ಈ ಎಲ್ಲಾ ರಿಪೋರ್ಟ್‌ಗಳನ್ನು ವೆರಿಫೈ ಮಾಡಿ ಅವರು ಹೇಳಿದ ಎಲ್ಲಾ ವಿಚಾರಗಳ ಬಗ್ಗೆ ನಾನು ನಮ್ಮ ಅಧಿಕಾರಿಗಳ ಜೊತೆಗೆ ಡಿಸ್ಕಸ್ ಮಾಡಿ ಪೂರ್ಣ ರಿಪ್ಲೈಯನ್ನು ನಾಳೆ ಕೊಡುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಇದು ಕೇವಲ ಸುರತ್ಕಲ್‌ಗೆ ಮಾತ್ರ ಸೀಮಿತವಾಗಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಬಂಟ್ವಾಳ, ಪುತ್ತೂರಿಗೂ ಕೂಡ ಸೀಮಿತವಾಗಿದೆ. ಈಗ ಅವರು ಏನು ನ್ಯಾಯಾಂಗ ತನಿಖೆಗೆ ಆದೇಶ ಮಾಡುತ್ತಾರೆ. ಅದನ್ನು ಸುರತ್ಕಲ್‌ಗೆ ಮಾತ್ರ ಸೀಮಿತ ಮಾಡಬಾರದು. ಇಡೀ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಗೆ ವಿಸ್ತರಿಸಬೇಕು. ಎಲ್ಲಾ ಕಡೆಗಳಲ್ಲಿ ಇರುವಂತೆ ಹಣದಕ್ಕೆ ಕೈವಾಡ ಇದೆಯಲ್ಲಾ ಅದರ ಬಗ್ಗೆ ಹೊರಗೆ ಬರಲಿಕ್ಕೆ ನ್ಯಾಯಾಂಗ ತನಿಖೆಯನ್ನು ಮೊದಲನೆಯದಾಗಿ ಇಡೀ ಜಿಲ್ಲೆಗೆ ವಿಸ್ತಾರ ಮಾಡಬೇಕು. ಇದರ ಕೇಂದ್ರವನ್ನು ಬೆಂಗಳೂರಿನಲ್ಲಿ ಮಾಡಬೇಕು ಎಂದು ಇದ್ದಾರೆ. ಬೆಂಗಳೂರಿನಲ್ಲಿ ಇದರ ಕೇಂದ್ರವನ್ನು ಮಾಡಿದರೆ ಇದರ ಬಗ್ಗೆ ಸಾಕ್ಷ್ಯವನ್ನು ಕೊಡಲಿಕ್ಕೆ ಜನಗಳಿಗೆ ಸಾಧ್ಯವಾಗುವುದಿಲ್ಲ. ದಯವಿಟ್ಟು ನ್ಯಾಯಾಂಗ ತನಿಖಾ ಕೇಂದ್ರವನ್ನು ಮಂಗಳೂರಿನಲ್ಲಿ ಮಾಡಬೇಕೆಂಬ ಆಗ್ರಹವನ್ನು ಈ ದಿಸೆಯಲ್ಲಿ ಮಾಡುತ್ತಿದ್ದೇವೆ. ಎಲ್ಲರೂ ಕೂಡ ಸ್ಪಷ್ಟ ಸಂಗತಿಗಳನ್ನು ಹೇಳಬೇಕು.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ :— xxxx

ಶ್ರೀ ಡಿ.ವಿ. ಸದಾನಂದಗೌಡ :— ಎಲ್ಲಿ ಬೇಕಾದರೂ ಮಾಡಿ, ನಿಮಗೆ ಅಲ್ಲೇ ಬೇಕಾದರೂ ಜಾಗವನ್ನು ಕೊಡೋಣ. ನೀವೇನೂ ಹೆದರಬೇಡಿ.

ಶ್ರೀ ಯು.ಆರ್. ಸಭಾಪತಿ :—ಕರೆಕ್ಟ್ ಆಗುತ್ತದೆ. ಇನ್ನೆಷ್ಟು ಜಿಲ್ಲೆಯಲ್ಲಿ ಇವರು ಬೆಂಕಿ ಕೊಡುತ್ತಾ ಹೋಗುತ್ತಾರೆ. ಓಟಿಗೋಸ್ಕರ..

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ :— ಈ ರೀತಿ ಮಾತನಾಡಿದರೆ ಯಾವುದಕ್ಕೆ ನಾಂದಿಯಾಗುತ್ತದೆ?

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ :— xxxx ಎಂದು ಹೇಳಿದರೆ ಏನಾಗುತ್ತದೆ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :— ನಾವೆಲ್ಲರೂ ಇರಬೇಕು ಎಂದು ಅಪೇಕ್ಷೆ ಪಡುತ್ತೀರಾ?

ಅಧ್ಯಕ್ಷರು :— ಇಂತಹ ವಿಚಾರದಲ್ಲಿ ಎಲ್ಲರೂ ಸ್ವಲ್ಪ ಜಾಣ್ಮೆಯಿಂದ ನಡೆದುಕೊಳ್ಳಬೇಕಾಗುತ್ತದೆ. ಮಾನ್ಯ ಸದಾನಂದಗೌಡರು ಹೇಳಿದರು, ಸಾಕ್ಷಿಗಳಿಗೆ

---

xxxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ತೊಂದರೆಯಾಗುತ್ತದೆ. ಸಾಕ್ಷಿಗಳ ವಿಚಾರಣಾ ಕೇಂದ್ರವನ್ನು ಮಂಗಳೂರಿನಲ್ಲಿ ಮಾಡಿ ಎಂದು ಹೇಳಿದರು. ಅದಕ್ಕೆ ಅವರು ಏನು ಪ್ರತಿಕ್ರಿಯಿಸಿದ್ದಾರೆಂದರೆ ಕೆಲವು ಸಾಕ್ಷಿಗಳನ್ನು ಸೆಂಟ್ರಲ್ ಜೈಲಿಗೆ ಕಳುಹಿಸಿ ಎಂದು ಅಲ್ಲ. ಇಂತಹ ಗಲಭೆಗಳಲ್ಲಿ ತೊಡಗತಕ್ಕಂತಹ ಎಲ್ಲರಿಗೂ ಬುದ್ಧಿ ಬರಬೇಕಾದರೆ ಸಾಕ್ಷಿಗಳ ವಿಚಾರಣೆಯನ್ನು ಸೆಂಟ್ರಲ್ ಜೈಲ್ ನಲ್ಲಿ ಮಾಡಿ ಎಂದು ಅವರು ಹೇಳಿದರು. ಏನು ನಿಮ್ಮವರನ್ನು ಕಳುಹಿಸುತ್ತಾರೆಂದು ಹೇಳುತ್ತೀರಾ? ಏಕೆ?

ಶ್ರೀ ಕೆ.ಎಸ್. ಈಶ್ವರಪ್ಪ :— ಅಧ್ಯಕ್ಷರೆ, ತಾವು ಹೀಗೆ ಹೇಳಿದರೆ ಹೇಗೆ? ತಾವು ಈ ರೀತಿ ಹೇಳಿದರೆ ನಮಗೆ ನ್ಯಾಯ ದೊರಕುವುದಿಲ್ಲ.

(ಗೊಂದಲ)

ಅಧ್ಯಕ್ಷರು :— ದಯಮಾಡಿ ತಾವೆಲ್ಲರೂ ಕುಳಿತುಕೊಳ್ಳಿ. ಮಾನ್ಯ ಸದಾನಂದಗೌಡರು ಹೇಳಿದ ಮಾತು ಬೇಡ. ಮಾನ್ಯ ಪ್ರತಾಪಚಂದ್ರಶೆಟ್ಟಿಯವರು ಹೇಳಿದ ಮಾತು ಬೇಡ. ಇಂತಹ ಗಲಭೆಗಳಲ್ಲಿ ಶಂಕಿತರಾದಂಥವರು, ಪಾಲ್ಗೊಳ್ಳತಕ್ಕಂತವರು ಅವರು ಯಾವುದೇ ಕೋಮಿಗೆ ಸೇರಿರಲಿ, ಯಾವುದೇ ಗುಂಪಿಗೆ ಸೇರಿರಲಿ, ಯಾವುದೇ ಪಕ್ಷಕ್ಕೆ ಸೇರಿರಲಿ, ಅವರೆಲ್ಲರೂ ತಿರುಗುತ್ತಿರುವುದರಲ್ಲಿ ಅವರಿಗೆ ಸಾಕಷ್ಟು ಶಿಕ್ಷೆಯಾಗಬೇಕು. ಈ ನ್ಯಾಯಾಂಗ ತನಿಖೆಯನ್ನು ಬೆಂಗಳೂರಿನಲ್ಲಿ ಅಲ್ಲ, ಸಾಧ್ಯವಾದರೆ ಗುಲ್ಬರ್ಗದಲ್ಲಾದರೂ ಮಾಡಿ ಎಂಬುದು ಅವರಿಗೆ ಗೊತ್ತಾಗಬೇಕು. ಮುಗ್ಧರ ಆಸ್ತಿಪಾಸ್ತಿಗೆ, ಅದು ಯಾವುದೇ ಕೋಮಿನವರಾಗಿರಬಹುದು, ಆ ಜಾತಿಯಾಗಬಹುದು, ಈ ಜಾತಿಯಾಗಬಹುದು ನಾವು ಇಷ್ಟೆಲ್ಲಾ ವಿಧಾನಸಭೆಯಲ್ಲಿ ಚರ್ಚೆ ಮಾಡುತ್ತೇವೆ. ನ್ಯಾಯಾಂಗ ತನಿಖೆಗೆ ಆರ್ಡರ್ ಮಾಡುತ್ತಿದ್ದೇವೆ. ಮಗುವನ್ನು ಕಳೆದುಕೊಂಡಿರುವಂತಹ ತಾಯಿಗೆ ಮಗುವನ್ನು ಕೊಡುವಂತಹ ಶಕ್ತಿ ನಮಗ್ಯಾರಿಗಾದರೂ ಇದೆಯಾ? ನಾನೇ ಆತಂಕವನ್ನು ವ್ಯಕ್ತಪಡಿಸಿದ್ದೇನೆ. ಅದನ್ನು ನಾನು ಸರಿ ಎಂದು ಹೇಳುತ್ತಿದ್ದೇನೆಯೇ? ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ :— ತಾಯಿಯು ತನ್ನ ಮಗುವನ್ನು ಕಳೆದುಕೊಂಡಂತೆ ತಾವೆಷ್ಟು ನೊಂದುಕೊಂಡಿದ್ದೀರಿ. ಶಾಸಕ ಚಿತ್ತರಂಜನ್‌ರವರು ಸತ್ತಾಗ ತಾವು ಬಂದಿದ್ದೀರಿ.

ಅಧ್ಯಕ್ಷರು :— ಹೌದು, ಅದು ನನ್ನ ಕರ್ತವ್ಯ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಅದರ ಬಗ್ಗೆ ತನಿಖೆಯಾಯಿತು. ಅದರ ಬಗ್ಗೆ ಎಲ್ಲಿ ಚರ್ಚೆಯಾಯಿತು. ಅವೆಲ್ಲಾ ಎನ್‌ಕ್ವೈಯರಿ ಆಗಬೇಕು.

(ಗೊಂದಲ)

ಅಧ್ಯಕ್ಷರು :— ದಯಮಾಡಿ ಕುಳಿತುಕೊಳ್ಳಿ. ಇದರಲ್ಲಿ ಪರ ಮತ್ತು ವಿರೋಧಗಳಿಲ್ಲ. ಇದರಲ್ಲಿ ಮಾನವೀಯತೆ ಒಂದೇ ಮುಖ್ಯ. ಮಾನವೀಯತೆಯೆ ನಮಗೆ ಆಧಾರ. ಯಾವ ಕಡೆ ಆಸ್ತಿಪಾಸ್ತಿ ನಷ್ಟವಾಗಿದ್ದರೂ, ಯಾರಿಗೆ ಪ್ರಾಣಹಾನಿಯಾಗಿದ್ದರೂ ಕೂಡ ನಾವು ನಾಗರೀಕ ಸಮಾಜದಲ್ಲಿರತಕ್ಕಂತಹ ನಾಗರೀಕರು ನಾಚಿ ತಲೆಯನ್ನು ತಗ್ಗಿಸಬೇಕು. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ತಿಳಿದೋ ಅಥವಾ ತಿಳಿಯದೇನೆ ಒಂದು ಚೂರು ನಮ್ಮದೇನಾದರೂ ಇದರಲ್ಲಿ ಸಹಕಾರ ಇದ್ದರೆ ನಾವು ನಾಗರೀಕರಾಗಿ ಸಮಾಜದಲ್ಲಿ ಬದುಕುವುದಕ್ಕೆ ನಾಲಾಯಕ್ಕು ಇದು ನನ್ನ ಸ್ಪಷ್ಟವಾದ ಅಭಿಪ್ರಾಯವಿದು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಅಧ್ಯಕ್ಷರೆ, ತಮ್ಮ ಮಾತಿಗೆ ನಾನು ಧ್ವನಿಗೂಡಿಸುತ್ತೇನೆ, ಇದು ನಿಜ. ಈ ರೀತಿ ಯಾರೇ ಆಗಿರಲಿ, ಸಮಾಜದಲ್ಲಿ ಅವರು ಎಂಥವರಾಗಿರಲಿ, ಯಾವುದೇ ಜಾತಿ, ಕೋಮಿನವರಾಗಿರಲಿ, ಇದರ ಬಗ್ಗೆ ಹಿಂದೆ ಮುಂದೆ ಬೀಳತಕ್ಕಂಥದ್ದರಲ್ಲಿ ಯಾರೂ ಆಗಬಾರದು. ತಾವು ಗುಲ್ಬರ್ಗ ಎಂದು ಹೇಳಿದ್ದೀರಲ್ಲಾ, ಅಂಥವರಿಗೆ ಶಿಕ್ಷೆ ಆಗಲೇ ಬೇಕು. ಆದರೆ ಇಲ್ಲಿ ನ್ಯಾಯಾಂಗ ತನಿಖೆಯ ವಿಳಂಬದ ಬಗ್ಗೆ ಸ್ಪಷ್ಟಪಡಿಸಬೇಕು. ತಮ್ಮ ಮೂಲಕ ನಾನು ಮನವಿಯನ್ನು ಮಾಡುತ್ತಿದ್ದೇನೆ. ಏಕೆಂದರೆ ಅನೇಕ ನ್ಯಾಯಾಂಗ ತನಿಖೆಯ ಬಗ್ಗೆ ಕೇಳಿದಾಗ ನ್ಯಾಯಾಂಗ ತನಿಖೆಯು ವಿಳಂಬವಾಗುತ್ತಿದೆ ಎಂದು ಹೇಳಿದ್ದೀರಿ. ಇಂಥ ನ್ಯಾಯಾಂಗ ತನಿಖೆಗಳು ವಿಳಂಬವಾಗಿ, ಅದರ ವರದಿಯು ಧೂಳು ಹಿಡಿಯಬಾರದು. ನ್ಯಾಯಾಂಗ ತನಿಖೆಯ ವರದಿ ಸ್ಪಷ್ಟವಾಗಿ ಬೇಗ ಹೊರಗಡೆ ಬರಬೇಕು ಆ ನ್ಯಾಯಾಂಗ ತನಿಖೆಯ ವರದಿಯನ್ನು ಕೊಟ್ಟಿದ್ದನ್ನು ಈ ಸಭೆಯ ಮುಂದೆ ಮಂಡಿಸಬೇಕು. ಆ ವರದಿ ಬಂದ ತೀರ್ಪಿಗೆ ಶಿಕ್ಷೆಯಾಗಬೇಕು. ಇದರ ಬಗ್ಗೆ ತಾವು ಸ್ಪಷ್ಟವಾದ ನಿರ್ಧಾರಕ್ಕೆ ಬರಬೇಕೆಂದು ನನ್ನ ಅಭಿಪ್ರಾಯ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಸಾಕ್ಷಿಗಳನ್ನು ಕೊಡುವುದಕ್ಕೆ ಬೆಂಗಳೂರಿಗೆ ಬಂದರೆ ತೊಂದರೆಯಾಗುತ್ತದೆ ಮಂಗಳೂರನ್ನು ತನಿಖಾ ಸೆಂಟರನ್ನಾಗಿ ಮಾಡಿ ಎಂದು ಹೇಳಿದ್ದಾರೆ. ಶ್ರೀ ಪ್ರತಾಪಚಂದ್ರಶೆಟ್ಟಿಯವರು ಎಂದು ಹೇಳಿದರು.

ಅಧ್ಯಕ್ಷರು :— ಅದು ಸರಿ, ಅದನ್ನು ಅವರು ಹೇಳಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ :— ಇದರಲ್ಲಿ ಬೇರೇನೂ ಭಾವನೆ ಇಲ್ಲ. ಆ ಹಿನ್ನೆಲೆಯಲ್ಲಿ ಅವರ ಮಾತು ಒಬ್ಬ ಸದಸ್ಯರಿಗೆ ಗೌರವ ತರುವಂಥದ್ದಲ್ಲ.

ಅಧ್ಯಕ್ಷರು :— ಹೌದು, ಅಂತಹ ಮಾತನ್ನು ಹೇಳಬಾರದು.

ಶ್ರೀ ಡಿ.ವಿ. ಸದಾನಂದಗೌಡ :— ನಾನು ಪ್ರಾಮಾಣಿಕವಾಗಿ ಹೇಳಿದ್ದು, ಬಡ ಸಾಕ್ಷಿದಾರರ ಬಗ್ಗೆ ಹೇಳಿದ್ದು, ಆರೋಪಿಗಳಿಗೆ ನಾನು ರಕ್ಷಣೆ ಕೊಡಬೇಕೆಂದು ಹೇಳುತ್ತಿಲ್ಲ. ಬೆಂಗಳೂರಿನಲ್ಲಿ ಅಲ್ಲದಿದ್ದರೆ ಡೆಲ್ಲಿಯಲ್ಲಾದರೂ ತನಿಖಾ ಕೇಂದ್ರವನ್ನು ಮಾಡಿ. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು, ಅದಕ್ಕೆ ನನ್ನ ಅಭ್ಯಂತರವಿಲ್ಲ. ಇನ್ನೊಂದು ವಿಚಾರವೇನೆಂದರೆ ಈ ಕೋಸ್ಟಲ್ ಬೆಲ್ಟ್‌ನಲ್ಲಿ ಪೂರ್ತಿಯಾಗಿ ವಿದೇಶಿ ಕೈವಾಡ ತುಂಬಾ ಇದೆ. ಇದರ ಬಗ್ಗೆ ಹೆಚ್ಚಿನ ವ್ಯವಸ್ಥೆ ಮಾಡಬೇಕಾಗಿದೆ. ಇದರ ಬಗ್ಗೆ ನಾನು ಎರಡು, ಮೂರು ಸಲಹೆ ಪ್ರಸ್ತಾಪ ಮಾಡಿದ್ದೇನೆ. ಸನ್ಮಾನ್ಯ ಗೃಹ ಸಚಿವರು ಇದರಲ್ಲಿ ಹೆಚ್ಚಿನ ಮುತುವರ್ಜಿಯನ್ನು ವಹಿಸಬೇಕು. ಕೊನೆಯದಾಗಿ ಓಟಿಗೋಸ್ಕರ ಇಂಥದ್ದನ್ನು ಪರಿವರ್ತನೆ ಮಾಡುವುದು ಉಂಟು. ಏಕೆಂದರೆ ಓಟ್ ಬ್ಯಾಂಕ್‌ಗಳನ್ನು ನಿರ್ಮಾಣ ಮಾಡುವಂತಹ ಪ್ರಯತ್ನ ನಡೆಯುತ್ತದೆ. ಇದನ್ನು ಅವರು ನೋಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :— ಶಾಸಕ ಚಿತ್ತರಂಜನ್‌ರವರ ವರದಿಯನ್ನು ಸದನದಲ್ಲಿ ಯಾವಾಗ ಮಂಡಿಸುತ್ತೀರಿ?

ಅಧ್ಯಕ್ಷರು :— ಈಗ ಈ ವಿಚಾರದ ಚರ್ಚೆ ಮುಕ್ತಾಯವಾಗಿದೆ. ಮಾನ್ಯ ಗೃಹಮಂತ್ರಿಗಳು ಮಾಹಿತಿಯನ್ನು ಪಡೆದುಕೊಂಡು ವಿವರವಾದ ಉತ್ತರವನ್ನು ನಾಳೇ ಕೊಡುತ್ತೇನೆಂದು ಹೇಳಿದ್ದಾರೆ. ಪುನಃ ಸದನವು ಮಧ್ಯಾಹ್ನ 3-30ಕ್ಕೆ ಸಮಾವೇಶ ಗೊಳ್ಳುವುದು.

ಸದನವು 2-26ಕ್ಕೆ ಮುಂದೂಡಲ್ಪಟ್ಟು ಮತ್ತೆ 3-30ಕ್ಕೆ ಸಮಾವೇಶ ಗೊಳ್ಳಲು ನಿರ್ಧರಿಸಿತು.

(ಸದನವು ಪುನ 3ಗಂಟೆ 40ನಿಮಿಷಕ್ಕೆ ಸಮಾವೇಶಗೊಂಡಿತು ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್) ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

MR. SPEAKER: Mr. Reddy, you will have to conclude in twenty minutes ಏಕೆಂದರೆ ನಾನು ಯಡಿಯೂರಪ್ಪನವರಿಗೆ ಪ್ರಾಮಿಸ್ ಮಾಡಿದ್ದೇನೆ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ :— ಮುಖ್ಯಮಂತ್ರಿಗಳು ಇರಬೇಕು. ಇದು ನೇರವಾಗಿ ಅವರಿಗೆ ಸಂಬಂಧಪಟ್ಟಿರತಕ್ಕಂಥಾದ್ದು. ನಾನು ತಮ್ಮಲ್ಲಿ ವಿನಂತಿಸಿದ್ದೆ.

ಅಧ್ಯಕ್ಷರು :— ಅವರು ಬರುತ್ತಾರೆ. ತಾವು ಪ್ರಾರಂಭಮಾಡಿ. ಲೇಬರ್ ಮಿನಿಸ್ಟರ್ ಇದ್ದಾರೆ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ:— ಅವರು ಹೊಸದಾಗಿ ಮಂತ್ರಿಯಾಗಿದ್ದಾರೆ. ವಿವರಗಳು ಪೂರ್ತಿಯಾಗಿ ಅವರಿಗೆ ಗೊತ್ತಿಲ್ಲ. ನೀವು ಮಾತನಾಡಿ ಎಂದರೆ ಮಾತನಾಡುತ್ತೇನೆ.

ಅಧ್ಯಕ್ಷರು:— ನೀವು ಮಾತನಾಡಿ. I will assist you.

(ಅ) ಬಿಪಿಎಲ್ ಕಾರ್ಖಾನೆಯ ನೌಕರರು ಮುಷ್ಕರ ಹೂಡಿರುವ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:— ಸನ್ಮಾನ್ಯ ಸಭಾಧ್ಯಕ್ಷರೇ, ಸುಮಾರು ನಾಲ್ಕು ತಿಂಗಳಿಂದ ಅಂದರೆ 19.11.98 ರಿಂದ ಬೆಂಗಳೂರು ನಗರ ಮತ್ತು ಅದರ ಸುತ್ತಮುತ್ತ ಇರತಕ್ಕಂಥ ಬಿ.ಪಿ.ಎಲ್ ಕಾರ್ಖಾನೆ ಕಾರ್ಮಿಕರು ಹೋರಾಟದಲ್ಲಿ ಇದ್ದಾರೆ. ಅವರ ಬೇಡಿಕೆ ಏನು ಎಂದರೆ ಸಂಬಳ ಜಾಸ್ತಿ ಕೊಡಿ ಎಂದು ಅವರು ಕೇಳಿಲ್ಲ ಅಥವಾ ಬೋನಸ್ ಕೇಳಿಲ್ಲ. ಬೇರೆ ಯಾವುದನ್ನೂ ಅವರು ಕೇಳಿಲ್ಲ. ಅವರು ಮಾಡಿದ ತಪ್ಪು ಏನೆಂದರೆ 4500 ಜನರು ಸೇರಿ ಟ್ರೇಡ್ ಯೂನಿಯನ್ ರಚನೆ ಮಾಡಬೇಕು ಎಂದು ಹೇಳಿ ಅರ್ಜಿ ಹಾಕಿದ ತಪ್ಪಿಗೆ ಒಂದೇ ಸಮನೆ ಅವರನ್ನು ಸಸ್ಪೆಂಡ್ ಮಾಡುವುದು, ಡಿಸ್‌ಮಿಸ್ ಮಾಡುವುದು ಪ್ರಾರಂಭವಾಯಿತು. ಇದು ಪ್ರಾರಂಭವಾದದ್ದು 1998ನೇ ಇಸವಿಯ ಅಕ್ಟೋಬರ್ ತಿಂಗಳಲ್ಲಿ. ಅವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡತಕ್ಕಂಥವರು ಮಹಿಳೆಯರು. ಶೇಕಡಾ 90 ಭಾಗ ಮಹಿಳೆಯರು ಅಲ್ಲಿ ಕೆಲಸ ಮಾಡುತ್ತಾರೆ. ಅವರೆಲ್ಲರೂ 17 ರಿಂದ 25 ವರ್ಷ ವಯಸ್ಸಿನವರು. ಇಷ್ಟು ಸಣ್ಣ ವಯಸ್ಸಿನ ಮಹಿಳೆಯರು ಅದರಲ್ಲಿ ಕೆಲಸ ಮಾಡುತ್ತಾರೆ. ಇದರಲ್ಲಿ ಉತ್ಪಾದನೆ ಮಾಡತಕ್ಕಂಥ ಸಾಮಾನು ಸರಂಜಾಮುಗಳು ಏನೇನು ಎಂಬುದು ತಮಗೆ ಗೊತ್ತಿದೆ. ಟಿ.ವಿ, ರೆಫ್ರಿಜಿರೇಟರ್, ಎಲೆಕ್ಟ್ರಾನಿಕ್ ಗೂಡ್ಸ್‌ನ್ನು ಅಲ್ಲಿ ಉತ್ಪಾದನೆ ಮಾಡುತ್ತಾರೆ. ಒಂದು ವರ್ಷಕ್ಕೆ ಅವರಿಗೆ ಮೂರುಸಾವಿರ ಕೋಟಿ ರೂಪಾಯಿಗಳಷ್ಟು ವಹಿವಾಟು ಇದೆ. ಹಾಗಾಗಿ ಪ್ರತಿವರ್ಷ 300 ಕೋಟಿ ರೂ. ಲಾಭ ಬರುತ್ತದೆ. ಇಂತಹ ಒಂದು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾ ಇರತಕ್ಕಂಥ ಕಾರ್ಮಿಕರಿಗೆ ಅವರು ಮಾಡಿದ್ದು ಏನೆಂದರೆ, ಇಷ್ಟು ವರ್ಷ ದುಡಿದರೂ ಕೂಡ ಅವರನ್ನು ಪರ್ಮನೆಂಟ್ ಮಾಡುವುದಿಲ್ಲ. ಅದಕ್ಕಿಂತ ಹೆಚ್ಚು ಕ್ರೂರವಾದ ವಿಚಿತ್ರವಾದದ್ದು ಏನು ಎಂದರೆ ಅಲ್ಲಿ ಮಹಿಳಾ ಕಾರ್ಮಿಕರು ಮದುವೆಯಾದ ತಕ್ಷಣ ಆ ಫ್ಯಾಕ್ಟರಿಯಿಂದ ಆ ಮಹಿಳೆಯನ್ನು ಕೆಲಸದಿಂದ ತೆಗೆದುಹಾಕಿಬಿಡುತ್ತಾರೆ. ಮದುವೆಯಾದವರನ್ನು ಅವರು ಕೆಲಸಕ್ಕೆ ಸೇರಿಸಿಕೊಳ್ಳುವುದಿಲ್ಲ. ಮದುವೆಯಾದರೆ ತಕ್ಷಣ ಕೆಲಸದಿಂದ ತೆಗೆದುಹಾಕಿಬಿಡುತ್ತಾರೆ. ಒಬ್ಬರನ್ನಾದರೂ, ಹತ್ತು ಪರ್ಸೆಂಟ್ ಕಾರ್ಮಿಕರನ್ನೂ ಕೂಡ ಇದುವರೆಗೂ ಅವರು ಪರ್ಮನೆಂಟ್ ಮಾಡಿಲ್ಲ. ಅಂತಹ ಸಂದರ್ಭದಲ್ಲಿ ಅಲ್ಲಿ ಕೆಲಸ ಮಾಡುತ್ತಾ ಇರತಕ್ಕಂಥ ಕಾರ್ಮಿಕರು ಅವರು ಒಂದು ಸಂಘ ಕಟ್ಟಬೇಕೆಂದು ಹೇಳಿ....

ಅಧ್ಯಕ್ಷರು:— ಮದುವೆಯಾದರೆ ತೆಗೆದುಹಾಕುತ್ತಾರಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:— ಹೌದು. ಮದುವೆಯಾದರೆ ಆ ಕಾರ್ಖಾನೆಯಲ್ಲಿ ಅವರು ಕೆಲಸ ಕೊಡುವುದಿಲ್ಲ.